

ಐಕ್ಯರಂಗ

ಸಂಪುಟ-೧೧ ಸಂಚಿಕೆ-೧೫ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಏಪ್ರಿಲ್ ೯, ೧೯೮೯ ರೂ. ೧-೦೦

ಪಂಜಾಬ್ ಸಮಸ್ಯೆ ಪರಿಹಾರಕ್ಕೆ ಎಡ-ಪಕ್ಷಗಳ ಸ್ಪಷ್ಟ ಸೂಚನೆಗಳು

ನವದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಮಾರ್ಚ್ 29ರಂದು ನಾಲ್ಕು ಎಡ ಪಕ್ಷಗಳಾದ ಸಿ.ಪಿ.ಐ.(ಎಂ), ಸಿ.ಪಿ.ಐ. ಫಾರ್ವರ್ಡ್ ಬ್ಲಾಕ್ ಹಾಗೂ ಆರ್.ಎಸ್.ಪಿ.ಯ ನೂರಾರು ಕಾರ್ಯಕರ್ತರು ಪಂಜಾಬ್ ಸಮಸ್ಯೆಯ ರಾಜಕೀಯ ಪರಿಹಾರದ ತುರ್ತಿನ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು ದಿನವಿಡೀ ಧರಣಿ ಕುಳಿತರು. ಈ ನಾಲ್ಕು ಪಕ್ಷಗಳ ರಾಷ್ಟ್ರಮಟ್ಟದ ಪ್ರಮುಖ ಮುಂದಾಳುಗಳು ಈ ಧರಣಿಗೆ ನೇತೃತ್ವ ನೀಡಿದ್ದರು.

ಸಿ.ಪಿ.ಐ.(ಎಂ)ನ ಇ.ಎಂ.ಎಸ್., ಬಿ.ಟಿ.ಆರ್., ಹರಿಕಿಷನ್‌ಸಿಂಗ್ ಸುರ್ಜಿತ್ ಮತ್ತು ಇ.ಬಾಲಾನಂದನ್, ಸಿ.ಪಿ.ಐ.ನ ಸಿ.ರಾಜೇಶ್ವರರಾವ್, ಅವತಾರ್‌ಸಿಂಗ್ ಮಲ್ಹೋತ್ರ ಮತ್ತು ಎಂ.ಎ.ಫರೂಕಿ, ಆರ್.ಎಸ್.ಪಿ.ಯ ತ್ರಿದಿಬ್ ಚೌಧುರಿ ಮತ್ತು ಫಾರ್ವರ್ಡ್ ಬ್ಲಾಕಿನ ಚಿತ್ತ ಬಸು ಧರಣಿಯಲ್ಲಿ ಭಾಗವಹಿಸಿದವರಲ್ಲಿ ಪ್ರಮುಖರು.

ನಂತರ ಪ್ರಧಾನಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ, ತನ್ಮೂಲಕ ಭಾರತವನ್ನು ಉಳಿಸಲು ಮೂರ್ತ ಕ್ರಮಗಳನ್ನು ಸೂಚಿಸಲಾಯಿತು.

1) ಪ್ರಧಾನಮಂತ್ರಿ ಇಂದಿರಾಗಾಂಧಿಯವರ ಕೊಲೆಯ ನಂತರ ನಡೆದ ದಂಗೆಗಳಿಗೆ ಕಾರಣರಾದವರೆಲ್ಲರ ವಿಚಾರಣೆ; ವಿಶೇಷವಾಗಿ ಮಿಶ್ರಾ ಆಯೋಗ ಮತ್ತು ಜೈನ್-ಬ್ಯಾನರ್ಜಿ ಸಮಿತಿಯ ಶಿಫಾರಸುಗಳ ಅನುಷ್ಠಾನ.

2) ರಾಜೀವ್-ಲೋಂಗೋವಾಲ್ ಒಪ್ಪಂದದ ಆಧಾರದ ಮೇಲೆ ಒಂದು ರಾಜಕೀಯ ಪರಿಹಾರ ಕಂಡು ಹಿಡಿಯಲು ಹೊಸ ಕ್ರಮಗಳನ್ನು ಕೈಗೊಳ್ಳಬೇಕು.

3) ಪಂಜಾಬ್ ಪ್ರಶ್ನೆ ಪರಿಶೀಲಿಸಿ ಪರಿಹಾರ ಕಂಡು ಹಿಡಿಯಲು ಸರ್ವ ಪಕ್ಷಗಳ ಸಮ್ಮೇಳನವನ್ನು ಸರ್ಕಾರ ಕರೆಯಬೇಕು.

4) ಭಯೋತ್ಪಾದಕರನ್ನು, ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುವ ಯಾರೊಂದಿಗೂ ಚೌಕಾಸಿ ನಡೆಸುವ ಪ್ರಯತ್ನ ನಿಲ್ಲಿಸಬೇಕು.

5) ಪಂಜಾಬಿನಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಜನತೆಯ ದೂರುಗಳನ್ನು ಕೇಳಿ ಪರಿಹರಿಸುವ ವ್ಯವಸ್ಥೆ ನಿರ್ಮಿಸಬೇಕು. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕ ವ್ಯಕ್ತಿಗಳ ಪ್ರಾತಿನಿಧ್ಯ ಇವುಗಳಲ್ಲಿರಬೇಕು.

6) ಗಲಭೆ ಪೀಡಿತ ಪ್ರದೇಶಗಳಲ್ಲಿ ಗ್ರಾಮ ರಕ್ಷಣಾ ಸ್ಕ್ವಾಡ್‌ಗಳನ್ನು ರಚಿಸಿ ಅಗತ್ಯ ಶಸ್ತ್ರಾಸ್ತ್ರ ಮತ್ತು ವಾಹನಗಳಿಂದ ಅವುಗಳನ್ನು ಸಜ್ಜಿತಗೊಳಿಸಬೇಕು.

ಈ ಸೂಚನೆಗಳ ಅನುಷ್ಠಾನಕ್ಕೆ ಒಂದು ಸಮಯಬದ್ಧ ಕಾರ್ಯಕ್ರಮರೂಪಿಸಬೇಕೆಂದುಮನವಿಪ್ರಧಾನಮಂತ್ರಿಗಳನ್ನು ಒತ್ತಾಯಿಸಿದೆ.



ಇತ್ತೀಚೆಗೆ ಮೂರು ದಿನಗಳ ಕಾಲ ಯಶಸ್ವಿಯಾಗಿ ನಡೆದ ಆಟೋ ಮುಷ್ಕರದ ಸಮಯದಲ್ಲಿ ಮುಷ್ಕರವನ್ನು ಹಿಂದೆಗೆಸಲು ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿ ನಂತರ ಹಿಂಬಾಗಿಲಿನ ಮೋಸಕ್ಕೆ ಕೈ ಹಾಕಿದ ಜನತಾದಳ ಸರ್ಕಾರದ ನೀತಿಯ ವಿರುದ್ಧ ಮತ್ತೆ ಆಟೋ ಚಾಲಕರು ಮುಷ್ಕರಕ್ಕೆ ಕೈ ಹಾಕಬೇಕಾದ ಅನಿವಾರ್ಯತೆಯುಂಟಾಗಿದೆ.

ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ಯಶಸ್ವಿ ಮುಷ್ಕರ

ರಾಜೀವ್‌ಗಾಂಧಿ ಸರ್ಕಾರ ಪೆಟ್ರೋಲ್ ಬೆಲೆಯನ್ನು ಸತತವಾಗಿ ಏರಿಸುತ್ತಾ ಬಂದಿರುವುದರಿಂದ ಆಟೋರಿಕ್ಷಾ ಪ್ರಯಾಣದರಗಳನ್ನು ಸಹ ಆಗಾಗ್ಗೆ ಪರಿಷ್ಕರಿಸುವುದು ಅನಿವಾರ್ಯವಾಗುತ್ತದೆ. ಆದರೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ಪ್ರತಿಬಾರಿಯೂ ಆಟೋರಿಕ್ಷಾ ಚಾಲಕರು ಮುಷ್ಕರ ಹೂಡಿದ ಬಳಿಕ ಮಾತ್ರವೇ ಸರ್ಕಾರವು ಗಮನಹರಿಸುತ್ತದೆ. ಕಳೆದ ವರ್ಷಾಂತ್ಯದಲ್ಲೇ ದರಗಳನ್ನು ಪರಿಷ್ಕರಿಸುವುದಾಗಿ ಭರವಸೆ ನೀಡಿದ್ದರೂ ಸೂಕ್ತ ಕ್ರಮ ಕೈಗೊಳ್ಳದ ಕಾರಣ ಮಾರ್ಚ್ 20ರಿಂದ 3ದಿನಗಳ ಕಾಲ ಚಾಲಕರು ಮುಷ್ಕರ ಹೂಡಿದರು. ಇದರ ಪರಿಣಾಮವಾಗಿ ಏಪ್ರಿಲ್ 1ರಿಂದ ಹೊಸ ದರಗಳನ್ನು ಜಾರಿಗೆ ತರುವುದಾಗಿ ಸಾರಿಗೆ ಸಚಿವರು ಪ್ರಕಟಣೆಯೊದನ್ನು ಹೊರಡಿಸಿದರು. ಕನಿಷ್ಠ ದರವನ್ನು 2 ರೂ.ನಿಂದ 2-40 ರೂ.ಗಳಿಗೆ ಏರಿಸಲಾಯಿತಾದರೂ ಮೂವರು ಪ್ರಯಾಣಿಕರಿಗೂ ಇದೇ ದರಗಳನ್ನು ಅನ್ವಯಿಸುವುದಾಗಿ ಪ್ರಕಟಿಸಲಾಯಿತು. ಸರ್ಕಾರದ ಈ ದೋಷಪೂರಿತ ಆದೇಶದಿಂದಾಗಿ ಮೂರನೆಯ ಪ್ರಯಾಣಿಕನಿಗೆ ಮೊದಲಿನಂತೆ ಶೇ. 25 ರಷ್ಟು ಹೆಚ್ಚುವರಿ ದರವನ್ನು ನಿಗದಿಪಡಿಸಬೇಕೆಂದು ಒತ್ತಾಯಿಸಿ ಚಾಲಕರು ಏಪ್ರಿಲ್ 1ರಿಂದ ಪುನಃ ಮುಷ್ಕರ ಹೂಡುವಂತಾಗಿದೆ.

ಸಿ.ಐ.ಟಿ.ಯು. ನೇತೃತ್ವದಲ್ಲಿ ಆಟೋರಿಕ್ಷಾ ಚಾಲಕರ ಸಂಘದ ಮುಂದಾಳತ್ವದಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿ ಮುಂದುವರೆದಿದೆ. ಹೋರಾಟದ

ಪುಟ 8

ಮಂಡಲ ಪಂಚಾಯ್ತಿ ನೌಕರರ ವಿಧಾನಸೌಧ ಚಲೋ

ಮಾರ್ಚ್ 30ರಂದು ಬೆಳಿಗ್ಗೆ 11ಗಂಟೆಗೆ ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಕರ್ನಾಟಕ ರಾಜ್ಯ ಮಂಡಲ ಪಂಚಾಯ್ತಿ ನೌಕರರ ಸಂಘದ ಆಶ್ರಯದಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ 2ಸಾವಿರಕ್ಕೂ ಮೀರಿದ ಮಹಿಳೆಯರನ್ನು ಒಳಗೊಂಡ ಬೃಹತ್ ರ್‍ಯಾಲಿ ವಿಧಾನಸೌಧ ಚಲೋ ನಡೆಸಿ ತಮ್ಮ ಬೇಡಿಕೆಗಳ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಿದರು.

ರಾಜ್ಯದ ವಿಜಾಪುರ, ಬಳ್ಳಾರಿ, ಬೀದರ, ರಾಯಚೂರು, ಗುಲ್ಬರ್ಗಾ, ಧಾರವಾಡ, ಕೋಲಾರ, ತುಮಕೂರು, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ ಮುಂತಾದೆಡೆಗಳಿಂದ ಮಂಡಲ ಪಂಚಾಯ್ತಿ ನೌಕರರು ಸುಡುವ ಬಿಸಿಲಿನಲ್ಲಿ ತಲೆ ಮೇಲೆ ಬುತ್ತಿ ಮಹಿಳೆಯರ ಕಂಕುಳಲ್ಲಿ ಕೂಸು ಮುಖದಲ್ಲಿ ಸಿಟ್ಟು ಕೈಯಲ್ಲಿ ಕೆಂಬಾವುಟ ಹಿಡಿದು ವಿಧಾನಸೌಧದಲ್ಲಿ ಕುಳಿತ ಪ್ರಭುಗಳಿಗೆ ತಮ್ಮ ಗೋಳಿನ ಕೂಗು ಕೇಳಿಸುವಂತೆ ಘೋಷಣೆಗಳನ್ನು ಕೂಗುತ್ತಿದ್ದರು. ಗ್ರಾಮ ನೈರ್ಮಲ್ಯ, ನೀರು ಪೂರೈಕೆ, ತೆರಿಗೆ ಸಂಗ್ರಹ, ಮುಂತಾದ ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ, ಮಂಡಲ ಪಂಚಾಯ್ತಿಗಳ ಜೀವಾಳವಾಗಿರುವ ಈ ನೌಕರರಿಗೆ ದೊರಕುತ್ತಿರುವ ಮಾಸಿಕ ವೇತನ 10 ರೂ.ನಿಂದ ಪ್ರಾರಂಭವಾಗಿ 5 0ರೂ.ನಿಂದ 240 ರೂ.ಗಳವರೆಗೂ ಪಡೆಯುತ್ತಾರೆ. ಈಗ ಪಡೆಯುವ ವೇತನದ ಕುರಿತು ಕೆಲ ನೌಕರರನ್ನು ಮಾತನಾಡಿಸಿದಾಗ ಈ ಸತ್ಯಾಂಶ ಹೊರ ಬಿತ್ತು.

ಪುಟ 8

ವಿಜ್ಞಾನಿಗಳ ಸಾಮಾಜಿಕ ಜವಾಬ್ದಾರಿ ಕಲ್ಕತ್ತಾದಲ್ಲಿ ಜನವಿಜ್ಞಾನ ಕಾಂಗ್ರೆಸ್

ವಿಜ್ಞಾನಿಗಳು ಮನುಕುಲಕ್ಕೆ ತಮಗಿರುವ ವೈಯುಕ್ತಿಕ ಮತ್ತು ಸಾಮೂಹಿಕ ಜವಾಬ್ದಾರಿಯನ್ನು ಅರಿತುಕೊಂಡು ಕಾರ್ಯತತ್ಪರರಾಗಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಕರೆ ನೀಡಿದರು. ಅವರು ಮಾರ್ಚ 15 -18ರಂದು ಕಲ್ಕತ್ತಾದಲ್ಲಿ ನಡೆದ 2ನೇ ಅಖಿಲ ಭಾರತ ಜನಪ್ರಿಯ ವಿಜ್ಞಾನ ಸಮ್ಮೇಳನವನ್ನು ಉದ್ಘಾಟಿಸುತ್ತಿದ್ದರು. ಅಮೆರಿಕಾದಂತಹ ಪಾಶ್ಚಿಮಾತ್ಯ ದೇಶಗಳ ವಿಜ್ಞಾನಿಗಳೂ ತಮ್ಮ ಸಂಶೋಧನೆಗಳು ಹೇಗೆ ದುರುಪಯೋಗಕ್ಕೀಡಾಗಿದೆ ಅಥವಾ ದುರುಪಯೋಗವಾಗಬಹುದೆಂಬುದನ್ನು ಜನರ ಗಮನಕ್ಕೆ ತರುತ್ತಿರುವುದು ಒಂದು ಆರೋಗ್ಯಕರ ಬೆಳವಣಿಗೆ ಎಂದರು. ಸಾಮಾಜಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯಾಗುವವರೆಗೂ ವಿಜ್ಞಾನ ಮಾನವ ಕುಲದ ವಿನಾಶಕ್ಕಾಗಿ ದುರ್ಬಳಕೆಯಾಗುವುದು ಖಚಿತವೆಂದರು. ನಮ್ಮ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ 'ಸ್ವಯಂ ಪರಿಪೂರ್ಣತೆ'' ದಿನೇ ದಿನೇ ದುರ್ಬಲಗೊಳ್ಳುತ್ತಿದೆ ಎಂದು ವಿಜ್ಞಾನಿಗಳು ಹಾಗೂ ಕೆಲ ಕೈಗಾರಿಕೋದ್ಯಮಿಗಳು ಟೀಕಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿದೆ. ತಂತ್ರಜ್ಞಾನವನ್ನು ಕುರುಡಾಗಿ ಸ್ವಾಗತಿಸುವುದು ಅಥವಾ ವಿರೋಧಿಸುವುದು ಸರಿಯಲ್ಲವೆಂದು ಅವರು ಅಭಿಪ್ರಾಯಪಟ್ಟರು. ತಂತ್ರಜ್ಞಾನವನ್ನು ಆಮದು ಮಾಡಿಕೊಂಡ ದೇಶಕ್ಕೆ ನಾವು ಎಲ್ಲಾ ರೀತಿಯಲ್ಲೂ ವಿಧೇಯಕರಾಗುವ ಪ್ರವೃತ್ತಿ ಸರಿಯಲ್ಲವೆಂದ ಅವರು ತಂತ್ರಜ್ಞಾನದ ಈ ಅವಲಂಬನೆ ಬಹಳ ವರ್ಷ ಮುಂದುವರಿಯಬಾರದೆಂದರು. ವಿಜ್ಞಾನದ ಲಾಭಗಳನ್ನು ಜನತೆಗೆ ತಲುಪಿಸಲೆಂದೇ ಪಶ್ಚಿಮಬಂಗಾಳದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸ್ಥಾಪಿಸಲ್ಪಟ್ಟಿದೆ ಎಂದ ಅವರು ಈ ಕಾರ್ಯದಲ್ಲಿ ಜನಪ್ರಿಯ ವಿಜ್ಞಾನ ಸಂಘಟನೆಗಳು ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು ಹೆಚ್ಚಿನ ಸಹಕಾರವನ್ನು ನೀಡಬೇಕೆಂದರು. ವಿಜ್ಞಾನಿಗಳೂ ಜನರ ಅನುಭವಗಳಿಂದಲೂ ಕಲಿಯಬೇಕೆಂದು ಅಭಿಪ್ರಾಯಪಟ್ಟರು.

ಸಮಾವೇಶದ ಆರಂಭ ಭಾಷಣ ಮಾಡಿದ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯ ವಿಜ್ಞಾನಿ ಡಾ॥ ಉದ್ಗಾಂವಕರ್ ಕಳೆದ ವರ್ಷ ನಡೆದ ಭಾರತ ಜನವಿಜ್ಞಾನ ಜಾಥಾ ದೇಶಾದ್ಯಂತ 26ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಸಂಘಟನೆಗಳನ್ನು ಒಟ್ಟಿಗೆ ತಂದಿದೆ. ವಿಜ್ಞಾನದ ಸಂದೇಶ ಮತ್ತು ಫಲಗಳನ್ನು ಜನತೆಯತ್ತ ಕೊಂಡೊಯ್ಯುವ ದಿಶೆಯಲ್ಲಿ ಒಂದು ದಿಟ್ಟ ಹೆಜ್ಜೆಯನ್ನಿಡಲಾಗಿದೆ. ಈ ಪ್ರಯತ್ನದಲ್ಲಾದ ಲೋಪದೋಷಗಳನ್ನು ಸರಿಪಡಿಸಿಕೊಂಡು ವಿಶಾಲ ತಳಹದಿಯ ಹೆಚ್ಚು ಸುಸಂಘಟಿತವಾದ ಪ್ರಯತ್ನ ಮುಂದುವರಿಯಬೇಕೆಂದರು. ಕಳೆದ ಒಂದು ವರ್ಷದ ಅವಧಿಯಲ್ಲಿ ಅಖಿಲ ಭಾರತ ಜನಪ್ರಿಯ ವಿಜ್ಞಾನ ಜಾಲ ನಡೆಸಿದ ಚಟುವಟಿಕೆಗಳ ಸಂಕ್ಷಿಪ್ತ ಪರಿಚಯವನ್ನು ಸಂಚಾಲಕರಾದ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತಿನ ಡಾ॥ ಎಂ.ಪಿ. ಪರಮೇಶ್ವರನ್ ನೀಡಿದರು.

ದೇಶದ ವಿವಿಧ ಭಾಗಗಳಿಂದ ಬಂದಿದ್ದ 61 ಜನಪ್ರಿಯ ವಿಜ್ಞಾನ ಸಂಘಟನೆಗಳ ಸುಮಾರು 300 ಜನ ಆಯ್ದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಸಮ್ಮೇಳನ ಪ್ರಾರಂಭದ ಮುನ್ನ ದಿನವಾದ ಮಾರ್ಚ 15 ರಂದು ಕಲ್ಕತ್ತಾ ಮತ್ತು ಜಾಧವಪುರ್ ವಿಶ್ವವಿದ್ಯಾನಿಲಯಗಳಿಂದ ಎರಡು ಪ್ರತ್ಯೇಕ ವಿಜ್ಞಾನ ಜಾಥಾ ಮೆರವಣಿಗೆಗಳು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕಲ್ಕತ್ತಾ ಮೈದಾನದಲ್ಲಿ ಒಗ್ಗೂಡಿಸಿ ಬಹಿರಂಗ ಸಭೆ ನಡೆಸಿದವು. ಈ ಸಾರ್ವಜನಿಕ ಸಭೆಯಲ್ಲಿ ಕಲ್ಕತ್ತಾದ ಮೇಯರ್ ಕಮಲ್‌ಬಸು ಪಶ್ಚಿಮಬಂಗಾಳ ವಿಜ್ಞಾನ ಮಂಚದ ಶ್ರೀ ದೀಪ್‌ಭಟ್ಟಾಚಾರ್ಯ, ಕೇರಳಶಾಸ್ತ್ರ ಸಾಹಿತ್ಯ ಪರಿಷತ್ತಿನ ಎಂ.ಪಿ.ಪರಮೇಶ್ವರನ್ ಎನ್.ಸಿ.ಎಸ್.ಟಿ.ಸಿ.ಯ ನರೇಂದ್ರ ಸೈಗಲ್ ಮುಂತಾದವರು ಈ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ಪಶ್ಚಿಮ ಬಂಗಾಳ ವಿಜ್ಞಾನ ಮಂಚದ ಕಲಾ ತಂಡಗಳ ವಿಜ್ಞಾನ ಕಲಾ ಜಾಥದ ಪ್ರದರ್ಶನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಈ ಸಮಾವೇಶದಲ್ಲಿ ಶಿಕ್ಷಣದಲ್ಲಿ ಜನಪ್ರಿಯ ವಿಜ್ಞಾನ ಸಂಘಟನೆಗಳ ಪಾತ್ರ, ಪರಿಸರ, ಸ್ವಯಂ ಪರಿಪೂರ್ಣತೆ, ಆರೋಗ್ಯ ಮತ್ತು ವಿಜ್ಞಾನ ಸಂವಹನ ಎಂಬ 5 ಪ್ರಮುಖ ವಿಷಯಗಳು ಚರ್ಚಿಸಲ್ಪಟ್ಟವು. ಮಧ್ಯಪ್ರದೇಶದ ಏಕಲವ್ಯ, ಕೇರಳಶಾಸ್ತ್ರ ಸಾಹಿತ್ಯ ಪರಿಷತ್ತು, ಪಶ್ಚಿಮ ಬಂಗಾಳ ವಿಜ್ಞಾನ ಮಂಚ್, ಡೆಲ್ಲಿ ಸೈನ್ಸ್ ಫೋರಂ ಮತ್ತು ಪಾಂಡಿಚೇರಿ ಸೈನ್ಸ್ ಫೋರಂಗಳು ಈ ವಿಷಯಗಳ ಬಗ್ಗೆ ಅನುಕ್ರಮವಾಗಿ ಪ್ರೌಢ ಪ್ರಬಂಧಗಳನ್ನು ಮಂಡಿಸಿದವು. 5 ಪ್ರತ್ಯೇಕ ಗುಂಪುಗಳಲ್ಲಿ ಆಯಾ ಕ್ಷೇತ್ರದ ಪರಿಣಿತರು ಹಾಗೂ ಜನಪ್ರಿಯ ವಿಜ್ಞಾನ ಕಾರ್ಯಕರ್ತರು ತೀವ್ರ ಚರ್ಚೆ ನಡೆಸಿ ಆಯಾ ಕ್ಷೇತ್ರದಲ್ಲಿ ಮುಂದಿನ ವರ್ಷ ನಡೆಸಬಹುದಾದ ಕಾರ್ಯಕ್ರಮ, ಚಳುವಳಿ ಮತ್ತು ಆಂದೋಲನಗಳ ಪಟ್ಟಿಯನ್ನು ತಯಾರಿಸಿದವು. ಪ್ರತ್ಯೇಕ ಚರ್ಚೆಗಳ ಸಂಗ್ರಹ ಮತ್ತು ಕಾರ್ಯಕ್ರಮಗಳ ಪಟ್ಟಿಯನ್ನು ಸಾಮಾನ್ಯ ಮಹಾಸಭೆಯಲ್ಲಿ ಮಂಡಿಸಿ ಕೆಲವು ಪ್ರಮುಖ ಸಾಮಾನ್ಯ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ದೇಶಾದ್ಯಂತ ನಡೆಯುತ್ತಿರುವ ಪರಿಸರ ಆಂದೋಲನಗಳನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದನ್ನು ನಡೆಸಲು ತೀರ್ಮಾನಿಸಲಾಯಿತು.

ಈ ವಿಚಾರ ಸಂಕಿರಣದಲ್ಲಿ ವಿವಿಧ ಕ್ಷೇತ್ರಗಳ ವಿಶೇಷ ಪರಿಣಿತರು ಹಾಗೂ ಜನಪ್ರಿಯ ವಿಜ್ಞಾನ ಕಾರ್ಯಕರ್ತರು ವಿವರವಾಗಿ ಮುಖಾಮುಖಿಯಾಗಿ ಪರಿಸರದ ಎಲ್ಲಾ ಅಂಶಗಳನ್ನು ಕುರಿತು ತೀವ್ರ ಚರ್ಚಿಸಿ ಪರಿಸರದ ಕ್ಷೇತ್ರದಲ್ಲಿ ಒಂದು ಸಾಮಾನ್ಯ ತಿಳುವಳಿಕೆಯನ್ನು ರೂಪಿಸಲು ತೀರ್ಮಾನಿಸಲಾಯಿತು. ವಿವಿಧ ಸಂಘಟನೆಗಳ ಚಟುವಟಿಕೆಗಳ ಪರಸ್ಪರ ಪರಿಚಯಕ್ಕೆ ಸಹಾಯಕವಾಗಲು ಒಂದು ಇಂಗ್ಲೀಷ್ ವಿಜ್ಞಾನ ಮಾಸ ಪತ್ರಿಕೆಯನ್ನು ಹಾಗೂ ಕೆಲವು ವಿಜ್ಞಾನ ಪುಸ್ತಕಗಳನ್ನೂ ಪ್ರಕಟಿಸಲು ತೀರ್ಮಾನಿಸಲಾಯಿತು. ಈಗಿರುವ ಪುಸ್ತಕ ಪುನರ್ ವಿಮರ್ಶೆಗೆ ಕಾರ್ಯಾಗಾರವನ್ನೂ ಮಧ್ಯಪ್ರದೇಶದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಜನಪ್ರಿಯ ವಿಜ್ಞಾನ ಒಂದು ಕಾರ್ಯಕರ್ತರಿಗೆ ತರಬೇತಿ ನೀಡಲು ರಾಷ್ಟ್ರಮಟ್ಟದಲ್ಲಿ 2-3 ತರಬೇತಿ ಶಿಬಿರಗಳನ್ನು ಹಾಗೂ ರಾಜ್ಯ ಮಟ್ಟದ ಶಿಬಿರಗಳನ್ನು ನಡೆಸಲು ತೀರ್ಮಾನಿಸಲಾಯಿತು. ಇದಲ್ಲದೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ವಯಸ್ಕರ ಶಿಕ್ಷಣದ ಬಗ್ಗೆ ರೂಪಿಸಬಹುದಾದ ಕೆಲವು ಕಾರ್ಯಕ್ರಮಗಳಿಗೆ ತಮ್ಮ ಮಿತಿಗಳಲ್ಲಿಯೇ ಸಹಕಾರ ಕೊಡಲು ತೀರ್ಮಾನಿಸಲಾಯಿತು.

ಸಮ್ಮೇಳನದ ಅಂತಿಮ ಅಧಿವೇಶನದಲ್ಲಿ 7ನಿರ್ಣಯಗಳ ಮಂಡನೆ ಮತ್ತು ಅಂಗೀಕಾರ ಕಾರ್ಯ ನಡೆಯಿತು. ಇತ್ತೀಚಿನ ಭೂಪಾಲ್ ವಿಷಾನಿಲ ಸಂತ್ರಸ್ಥರ ಬಗ್ಗೆ ಸರ್ವೋಚ್ಚನ್ಯಾಯಾಲಯದ ಒಪ್ಪಂದ ತೀರ್ಪನ್ನು ಖಂಡಿಸಿ ಅನಿಲ್ ಸದ್ಗೋಪಾಲ್ ಮಾತನಾಡಿದರು. ಈ ತೀರ್ಪಿನಿಂದ ಅನಿಲ ಸಂತ್ರಸ್ಥರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ತೀರ್ಪನ್ನು ಪುನರ್ ವಿಮರ್ಶಿಸಲು ಮತ್ತು ಕೂಡಲೇ ತಾತ್ಕಾಲಿಕ ಪರಿಹಾರವನ್ನು ಬಿಡುಗಡೆ ಮಾಡಲು ಒತ್ತಾಯಿಸಲಾಯಿತು. ಇದರ ಬಗ್ಗೆ ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದನ್ನು ದೆಹಲಿಯಲ್ಲಿ ನಡೆಸಿ ಮುಂದಿನ ಆಂದೋಲನದ ಸ್ವರೂಪವನ್ನು ಅಲ್ಲಿ ನಿರ್ಧರಿಸಲು ತೀರ್ಮಾನಿಸಲಾಯಿತು. ರಾಷ್ಟ್ರೀಯ ಬೀಜ ನೀತಿಯ ಬಗ್ಗೆ ಉಷಾಮೆನನ್, ಪೇಟೆಂಟ್ಸ್ ಆ್ಯಕ್ಟ್ ಬಗ್ಗೆ ಪ್ರೊಬೀರ್, ಸಾರ್ವಜನಿಕ ವಲಯದ ಬಗ್ಗೆ ಅಶೋಕ ರಾವ್, ಸ್ತ್ರೀ ಭ್ರೂಣ ನಾಶದ ಬಗ್ಗೆ ಅಮಿತ್ ಸೇನ್ ಗುಪ್ತಾ, ಔಷಧ ಬಗ್ಗೆ ಜೆ.ಎಸ್.ಮಜುಂದಾರ್ ಮತ್ತು ಸಫ್ದರ್ ಹಾಷ್ಮಿಯ ಬಗ್ಗೆ ಎಂ.ಪಿ.ಪರಮೇಶ್ವರನ್ ರವರುಗಳಿಂದ ನೀತಿಯ ಮಂಡಿಸಲ್ಪಟ್ಟ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

"ಅಖಿಲ ಭಾರತ ಜನಪ್ರಿಯ ವಿಜ್ಞಾನ ಜಾಲ''ದ ಸಂಚಾಲಕರಾಗಿ ಪುನರಾಯ್ಕೆಗೊಂಡ ಎಂ.ಪಿ.ಪರಮೇಶ್ವರನ್ ಮುಂದಿನ ವರ್ಷ ಜಾಲ ಸಂಘಟಿಸಬೇಕಾಗಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಗಳನ್ನು ನೀಡಿದರು. ಅಧ್ಯಕ್ಷರಾಗಿ ಪುನರಾಯ್ಕೆಗೊಂಡ ಡಾ॥ ಉದ್ಗಾಂವೆಕರ್‌ರವರು ಮುಂದಿನ ಸಮ್ಮೇಳನ 1990ರಲ್ಲಿ ಬೆಂಗಳೂರಿನಲ್ಲಿ ನಡೆಯಬೇಕೆಂದು ತೀರ್ಮಾನಿಸಿರುವುದನ್ನು ಸಭೆಗೆ ತಿಳಿಸಿ ಸಮಾರೋಪ ಭಾಷಣ ಮಾಡಿದರು.

ವರದಿ-ಸಿರಾಜ್

ಬೆಂಗಳೂರಿನಲ್ಲಿ ಗ್ರಾಮೀಣ ಬ್ಯಾಂಕ್ ನೌಕರರ ಅಖಿಲ ಭಾರತ ಸಮ್ಮೇಳನ

ದೇಶಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ 198 ಗ್ರಾಮೀಣ ಬ್ಯಾಂಕ್‌ಗಳ 13,000 ಶಾಖೆಗಳಲ್ಲಿ ದುಡಿಯುತ್ತಿರುವ 65 ,000 ನೌಕರರ ಪ್ರತಿನಿಧಿಸುವ ಅಖಿಲ ಭಾರತ ಸಮ್ಮೇಳನ ದಿನಾಂಕ ಏಪ್ರಿಲ್ 15 ರಿಂದ 17ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ಈ ಸಮ್ಮೇಳನಕ್ಕೆ ಭರದಿಂದ ಸಿದ್ಧತೆಗಳು ಸಾಗುತ್ತಿವೆ.

11 ವರ್ಷಗಳ ಹಿಂದೆ ಬ್ಯಾಂಕ್ ನೌಕರರ ನೇತಾರ ಆಶಿಸ್‌ಸೇನ್‌ರವರ ನಾಯಕತ್ವದಲ್ಲಿ ಸ್ಥಾಪಿತವಾದ ಈ ನೌಕರರ ಸಂಘ ಅಂದಿನಿಂದಲೂ ನಿರಂತರವಾಗಿ ಕಾರ್ಮಿಕರ ಮಧ್ಯೆ ವರ್ಗ ಸಹಕಾರಿ ಮನೋಭಾವದ ವಿರುದ್ಧ ದುಡಿಯುತ್ತಿರುವ, ಕ್ರಾಂತಿಕಾರಿ ಮನೋಭಾವದ ನಾಯಕತ್ವದಲ್ಲಿಯೇ ಬೆಳೆದುಬಂದಿದೆ. 65 ,000 ನೌಕರರಲ್ಲಿ 5 0,000 ನೌಕರರನ್ನು ತನ್ನ ಸದಸ್ಯರನ್ನಾಗಿ ಪಡೆದಿದೆ.

1986ರ ಸೆಪ್ಟೆಂಬರ್‌ನಲ್ಲೊಮ್ಮೆ ಹಾಗೂ 87ರ ಮಾರ್ಚ್‌ನಲ್ಲೊಮ್ಮೆ ಅಖಿಲಭಾರತ ಮುಷ್ಕರವನ್ನು ನಡೆಸಿರುವ ಈ ಸಂಘ ಕೋರ್ಟ್, ಸಂಸತ್ತುಗಳ ಒಳಗೂ ಹೊರಗೂ ನಡೆಸಿದ ಹೋರಾಟದ ಫಲವಾಗಿ ಗ್ರಾಮೀಣ ಬ್ಯಾಂಕ್ ನೌಕರರಿಗೆಂದೇ ರಾಷ್ಟ್ರೀಯ ಕೈಗಾರಿಕಾ ವಿವಾದದ ಟ್ರಿಬ್ಯೂನಲ್‌ನ ನೇಮಕಾತಿಯಲ್ಲಿ ಯಶಸ್ವಿಯಾಗಿದೆ. ಹಾಗೂ ಟ್ರಿಬ್ಯುನಲ್‌ನ ಮುಂದೆ ನೌಕರರ, ವಾದ ಹಾಗೂ ಸಾಕ್ಷ್ಯಗಳನ್ನು ಬಲವಾಗಿ ಮಂಡಿಸುತ್ತಿದೆ. ಗ್ರಾಮಗಳಲ್ಲಿ ಕ್ಲಿಷ್ಟ ಕೆಲಸ ಮಾಡಬೇಕಾದ ಇವರನ್ನು ಗ್ರಾಮ ಪಂಚಾಯತಿಗಳ ನೌಕರರಂತೆಯೇ ಪರಿಗಣಿಸಲಾಗುತ್ತಿದೆ ವೇತನ ಹಾಗೂ ನಿಯಮಗಳಲ್ಲಿ ಗ್ರಾಮೀಣ ಅಂಚೆ ಕಛೇರಿಗಳ ಗ್ರಾಮಪಂಚಾಯ್ತಿ ನೌಕರರಂತೆ ಪರಿಗಣಿಸುವ ಮನೋಭಾವವಿದೆ.

ಆದ್ದರಿಂದ ವಾಣಿಜ್ಯ ಬ್ಯಾಂಕ್‌ನ ನೌಕರರ ಸಮಾನ ವೇತನ ಶ್ರೇಣಿಗಾಗಿ ಈ ನೌಕರ ಸಮುದಾಯ ಹೋರಾಟ ನಡೆಸುತ್ತಿದೆ. ಹಾಗೆಯೇ ವಾಣಿಜ್ಯ ಬ್ಯಾಂಕ್‌ಗಳ ಆಡಳಿತ ಮಂಡಳಿ ಹಾಗೂ ಅವುಗಳ ನೌಕರ ಸಮುದಾಯ ಆಗಾಗ್ಗೆ ವೇತನ ಮತ್ತಿತರ ಸೇವಾ ನಿಯಮಗಳ ಬಗ್ಗೆ ಒಪ್ಪಂದಕ್ಕೆ ಬರಲು ಜಂಟಿ ಸಮಿತಿಯೊಂದನ್ನು ಕೋರುತ್ತಿದ್ದಾರೆ.

ಅಲ್ಲದೆ ದಿನಗೂಲಿ ನೌಕರರಂತೆ ಪರಿಗಣಿಸಲಾಗುತ್ತಿರುವ ಬ್ಯಾಂಕ್‌ನ ನಾಲ್ಕನೇ ದರ್ಜೆ ನೌಕರರನ್ನು ಖಾಯಂಗೊಳಿಸಬೇಕು ಬ್ಯಾಂಕ್‌ಗಳಲ್ಲಿ ಹೆಚ್ಚುತ್ತಿರುವ ಕೆಲಸದ ಹೊರೆ ಹಾಗೂ ಹೊಣೆಗಳಿಗನುಗುಣವಾಗಿ ಬ್ಯಾಂಕ್ ಸಿಬ್ಬಂದಿಯನ್ನು ಹೆಚ್ಚಿಸಬೇಕು. ಒಮ್ಮೆ ಗ್ರಾಮೀಣ ಬ್ಯಾಂಕಿಂಗ್ ಅನ್ನು ಗ್ರಾಮೀಣ ಪ್ರದೇಶದ ಸಮಸ್ಯೆಗಳಿಗೆ ಮೋಕ್ಷವೆಂಬಂತೆ ಪ್ರಚಾರ ಮಾಡಿ ಎಲ್ಲೆಂದರಲ್ಲಿ ಗ್ರಾಮೀಣ ಬ್ಯಾಂಕ್‌ಗಳನ್ನು ಆರಂಭ ಮಾಡುತ್ತಿದ್ದ ನೀತಿಯಿಂದ ಈಗ ಅವುಗಳ ಬೆಳವಣಿಗೆಗೆ ತಡೆ ಹಾಕಿ ವಾಣಿಜ್ಯಬ್ಯಾಂಕ್ ಶಾಖೆಗಳನ್ನು ತೆರೆಯುವುದಕ್ಕೆ ಹೆಚ್ಚು ಒತ್ತು ನೀಡುವ ನೀತಿ ಅನುಸರಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಬದಲಾಗಬೇಕೆಂದು ಒತ್ತಾಯಿಸುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಬಡ್ಡಿ ಸಾಹುಕಾರರ ಭೂಮಾಲಿಕರ ಹಿಡಿತದಿಂದ ರೈತರನ್ನು ಅದರಲ್ಲಿಯೂ ಸಣ್ಣ ಹಾಗೂ ಮಧ್ಯಮ ರೈತರನ್ನು ಕೃಷಿ ಕೂಲಿಕಾರರನ್ನು ಬಿಡುಗಡೆ ಮಾಡುವ ಹಾಗೂ ಭೂಮಾಲೀಕರ ಹಿಡಿತದಲ್ಲಿ ಸೊರಗಿರುವ ಸಹಕಾರಿ ವ್ಯವಸ್ಥೆಗೆ ಬೆಂಬಲವಾಗುವ ಗ್ರಾಮೀಣ ಬ್ಯಾಂಕ್‌ಗಳನ್ನು ಸಮರ್ಥವಾಗಿ ರೈತ ಪರವಾಗಿ ಬಳಸಿಕೊಳ್ಳಬೇಕೆಂಬ ಬೇಡಿಕೆಗಳಿಗಾಗಿಯೂ ಸಂಘ ಹೋರಾಡುತ್ತಿದೆ.

ಈ ಸಂಘದ ಸಮ್ಮೇಳನ ದಿನಾಂಕ 15 ರಂದು ಉದ್ಘಾಟನೆಯಾಗಲಿದೆ. ರಾಜ್ಯದ ಮಂತ್ರಿ ಮಾನ್ಯರುಗಳ ಜೊತೆಗೆ ಲೋಕಸಭೆಯ ಸಿ.ಪಿ.ಐ.(ಎಂ) ನಾಯಕ ಕಾ॥ ಬಸುದೇವ್ ಆಚಾರ್ಯ ಹಾಗೂ ರಾಜ್ಯ ಸಿ.ಐ.ಟಿ.ಯು. ನಾಯಕರು ಅದರಲ್ಲಿ ಭಾಗವಹಿಸಲಿದ್ದಾರೆ. ದಿನಾಂಕ 16ರಂದು "ಗ್ರಾಮೀಣ ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಅಭಿವೃದ್ಧಿ'' ಎಂಬ ವಿಷಯವಾಗಿ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಗಿದೆ. ಈ ವಿಚಾರ ಸಂಕಿರಣದಲ್ಲಿ ತೆಲುಗುದೇಶಂನ ಸಂಸದೀಯ ನಾಯಕ ಪಿ.ಉಪೇಂದ್ರ ಲೋಕ ಸಭಾ ಸದಸ್ಯರಾದ ಸುಧೀರ್‌ರಾಯ್ ಹಾಗೂ ಆಶಿಸ್‌ಸೇನ್ ಕರ್ನಾಟಕದ ಜನಪ್ರಿಯ ಪತ್ರಕರ್ತ ಎಚ್ಚೆಸ್ಕೆ ಭಾಗವಹಿಸಲಿದ್ದಾರೆ.

16 ಹಾಗೂ 17ರಂದು ಪ್ರತಿನಿಧಿಗಳ ಸಮಾವೇಶ ನಡೆಯಲಿದೆ ದಿನಾಂಕ 15 ರಂದು ಉದ್ಘಾಟನಾ ಸಮಾರಂಭಕ್ಕೆ ಮೊದಲು ಚಿಕ್ಕಲಾಲ್‌ಬಾಗ್‌ನಿಂದ ಪುರಸಭಾ ಭವನದವರೆಗೂ ಬ್ಯಾಂಕ್ ನೌಕರರ, ಕಾರ್ಮಿಕ ಮೆರವಣಿಗೆ ನಡೆಯಲಿದೆ.

ಆರದ ದುರಂತದ ಬಿಸಿ

ಭೂಪಾಲ್ ವಿಷಾನಿಲ ದುರಂತದ ಸಂದರ್ಭದಲ್ಲಿ ಶ್ವಾಸಕೋಶಗಳು ತೀವ್ರವಾಗಿ ಹಾಳಾಗಿದ್ದ ಪವಾರ್ ಎಂಬಾತ ಇಲ್ಲಿನ ಜವಾಹರಲಾಲ್ ಅನಿಲ ಪರಿಹಾರ ಆಸ್ಪತ್ರೆ ಯಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡರು.

ವಿಷಾನಿಲ ಸೋರಿದ ದಿನದಿಂದಲೂ ಚಿಕಿತ್ಸೆ ಪಡೆಯುತ್ತಿದ್ದು ಅಂದಿನಿಂದಲೂ ಅಮ್ಲಜನಕ ಪಡೆದು ಬದುಕುತ್ತಿದ್ದ ಕೈಲಾಸ್‌ಪವಾರ್ ಎಂಬ 25 ವರ್ಷದ ಯುವಕನನ್ನು ಇತರ ಹಲವಾರು ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ನೀಡಿದ ಬಳಿಕ ಇಲ್ಲಿಗೆ ಸೇರಿಸಲಾಗಿತ್ತು.

ಆಹಾರ ಮಾರುವ ವೃತ್ತಿ ನಡೆಸಿ ಜೀವಿಸುತ್ತಿದ್ದ ಪವಾರ್ ವೈದ್ಯರ ಕೆಟ್ಟನಡ ವಳಿಕೆ ಮತ್ತು ಸರ್ಕಾ[illegible] ನಿರ್ಲಕ್ಷ್ಯದಿಂದ ಬೇಸತ್ತಿದ್ದನಲ್ಲದೆ ತನ್ನ ಪತ್ನಿ ಹಾಗೂ ಎರಡು ಮಕ್ಕಳನ್ನು ಸಾಕಲಾಗದ ಸ್ಥಿತಿ ತಲುಪಿದ್ದ ಎಂದು ಹೇಳಲಾಗಿದೆ.

ಕೃಷಿ ಕೂಲಿಗಾರರ 5 ಬೇಡಿಕೆಗೆ ಒತ್ತಾಯಿಸಿ ರಾಜ್ಯಾದ್ಯಂತ ಧರಣಿ

ಮಾರ್ಚ್ 27ರಂದು ರಾಜ್ಯದ ವಿವಿಧೆಡೆಗಳಲ್ಲಿ 5 ಬೇಡಿಕೆಗಳನ್ನು ಹಾಗೂ ಸ್ಥಳೀಯ ಬೇಡಿಕೆಗಳನ್ನು ಮುಂದಿಟ್ಟು ನಡೆಸಿದ ಧರಣಿ ಸತ್ಯಾಗ್ರಹದ ವರದಿಗಳನ್ನು ಪ್ರಕಟಿಸುತ್ತಿದ್ದೇವೆ.

ಬೀಳಗಿ ತಾಲೋಕು

ಬಸ್ ನಿಲ್ದಾಣದಿಂದ ಹೊರಟ ಕೃಷಿ ಕೂಲಿಕಾರರ ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಹಾಯ್ದು ಕಛೇರಿ ತಲುಪಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಹರಿಜನ-ಗಿರಿಜನರ ಮೇಲೆ ಹೆಚ್ಚಿರುವ ದಬ್ಬಾಳಿಕೆ, ಭೂಹೀನರಿಗೆ ಭೂಮಿ ಹಂಚಬೇಕು, ರಸ್ತೆ ರಿಪೇರಿ ಮುಂತಾದ ಬೇಡಿಕೆಗಳ ಮನವಿಯನ್ನು ಅರ್ಪಿಸಲಾಯಿತು. ಬೇಡಿಕೆ ಕುರಿತು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಹಶೀಲ್ದಾರ್ ಆಶ್ವಾಸನೆ ನೀಡಿದರು. ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಕಾ॥ ಹೊನ್ನುಟಗಿಯವರು ನೇತೃತ್ವ ವಹಿಸಿದ್ದರು.

ಉಡುಪಿ

500 ಕ್ಕೂ ಮೀರಿದ ಕೃಷಿ ಕೂಲಿಕಾರರು ಉಡುಪಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ 7 ಪ್ರಮುಖ ಬೇಡಿಕೆಗಳ ಮನವಿಯನ್ನು ಪ್ರಧಾನ ಮಂತ್ರಿ ಹಾಗೂ ರಾಜ್ಯದ ಮುಖ್ಯ ಮಂತ್ರಿಯವರಿಗೆ ತಹಶೀಲ್ದಾರ್ ರವರ ಮೂಲಕ ಅರ್ಪಿಸಿದರು. ನಂತರ ನಡೆದ ಸಭೆಯಲ್ಲಿ ಕಾ॥ ಡೇವಿಡ್ ಎ. ಕರ್ಕಡರವರು ಬೇಡಿಕೆಗಳ ಕುರಿತು ಮಾತನಾಡಿದರು.

ಬೆಳಗಾಂ

ನೂರಾರು ಕೃಷಿ ಕೂಲಿಕಾರರು ಬೆಳಗಾಂ ಜಿಲ್ಲಾ ಸಂಘಟನಾ ಸಮಿತಿ ಆಶ್ರಯದಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ್ ಕಛೇರಿ ಮುಂದೆ ಸಂಜೆ 4 ಗಂಟೆಯಿಂದ ಧರಣಿ ಸತ್ಯಾಗ್ರಹ ನಡೆಸಿದರು. ಕೃಷಿ ಕೂಲಿಕಾರರಿಗೆ ಕೇಂದ್ರ ಶಾಸನ, ಕನಿಷ್ಠ ವೇತನ ಜಾರಿ, ಭೂಹೀನರಿಗೆ ಭೂಮಿ, ನಿವೇಶನ, ಅಗತ್ಯ ವಸ್ತುಗಳ ವಿತರಣೆ ಮುಂತಾದ ಬೇಡಿಕೆಗಳ ಮನವಿಯನ್ನು ಅರ್ಪಿಸಲಾಯಿತು. ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಕಾ॥ ಎಲ್.ಎಸ್.ನಾಯಕ್ ಹಾಗೂ ಕಾ॥ ಶ್ರೀಕಾಂತ ಹಟ್ಟಿಹೊಳಿಯವರು ನೇತೃತ್ವ ವಹಿಸಿದ್ದರು.

ರಾಯಚೂರು ಜಂಟಿ ರ್‍ಯಾಲಿ-ಧರಣಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಯಚೂರು ಹಾಗೂ ಜಿಲ್ಲಾ ಸಂಘರ್ಷ ಸಮಿತಿಗಳ ಜಂಟಿ ಆಶ್ರಯದಲ್ಲಿ ಸುಮಾರು 250 ಕಾರ್ಯಕರ್ತರು ಸಂಘದ ಕಛೇರಿಯಿಂದ ಹೊರಟು ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿ ಮನವಿ ಅರ್ಪಿಸಿತು.

ಭೂಮಿ ಹಂಚಿಕೆ, ಕೇಂದ್ರ ಶಾಸನ, 16 ರೂ. ಕೂಲಿ, ದಲಿತರ ಮೇಲಿನ ದೌರ್ಜನ್ಯ ನಿಲ್ಲಬೇಕು, ಪಡಿತರ ವ್ಯವಸ್ಥೆ ಮುಂತಾದ ಬೇಡಿಕೆಗಳ ಜೊತೆಗೆ ನಿವೇಶನ ರಹಿತರಿಗೆ ಜನತಾಮನೆ, ಬರಪರಿಹಾರ, ಏಪ್ರಿಲ್ 23ರವರೆಗೆ ತುಂಗಭದ್ರಾ ನೀರು ಬಿಡಲು ಒತ್ತಾಯಿಸಲಾಯಿತು. ಸಂಜೆ 5 ಗಂಟೆಯಿಂದ ನಡೆದ ಧರಣಿ ನಂತರ ರೈತ ನಾಯಕ ಕಾ॥ ಲಿಂಗಪ್ಪ ಪೂಜಾರ್ ಮತ್ತು ಕಾ॥ ಮಲ್ಲಪ್ಪ ಜಾಲಹಳ್ಳಿಯವರು ಮಾತನಾಡಿದರು. ಕಾ॥ ಎಚ್.ಎಂ.ನಾಯಕ್ ಮತ್ತು ಪರಪ್ಪ ರಘುನಾಥಹಳ್ಳಿ ಮೆರವಣಿಗೆ ನೇತೃತ್ವ ವಹಿಸಿದ್ದರು.

ವೈದ್ಯರ ನಿರ್ಲಕ್ಷ್ಯ: ಗರ್ಭಿಣಿ ಸಾವು-ತೀವ್ರ ಪ್ರತಿಭಟನೆ

ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕುಟುಂಬ ಯೋಜನೆ ಶಸ್ತ್ರಕ್ರಿಯೆಗಾಗಿ ಮಾರ್ಚ್ 25 ರಂದು ಬಂದ 3 ತಿಂಗಳ ಗರ್ಭಿಣಿ ಲಕ್ಷ್ಮಿಯವರು ಡಾಕ್ಟರ್‌ರವರ ನಿರ್ಲಕ್ಷ್ಯದಿಂದಾಗಿ ಶಸ್ತ್ರಕ್ರಿಯೆ ನಡೆಯುವಾಗಲೇ ಅಸುನೀಗಿದ ಘಟನೆ ವರದಿಯಾಗಿದೆ. ಹೃದಯಸ್ತಂಭನದಿಂದ ಮರಣ ಹೊಂದಿದ್ದಾಳೆಂದು ಡಾಕ್ಟರ್ ಸುಳ್ಳು ಹೇಳಿಕೆ ನೀಡಿ ಆಕೆಯ ಗಂಡನಿಗೆ ಶವವನ್ನು ತೆಗೆದುಕೊಂಡು ಹೋಗಲು ಬೆದರಿಕೆ ಹಾಕಲಾಯಿತು.

ವಿಷಯ ತಿಳಿದ ಕಾರ್ಮಿಕರು ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಪ್ರತಿಭಟಿಸಲು ಪ್ರಾರಂಭಿಸಿದರು. ಮರಣೋತ್ತರ ಪರೀಕ್ಷೆಗೆ ಒಳಪಡಿಸಲು ಜನತೆಯ ಒತ್ತಾಯಕ್ಕೆ ಮಣಿದ ವೈದ್ಯಾಧಿಕಾರಿಗಳು ಶವಪರೀಕ್ಷೆ ನಡೆಸಿದರು. 26ರಂದು ಕುಂದಾಪುರದ ಬೀದಿಯಲ್ಲಿ ಶವ ಮೆರವಣಿಗೆ ನಡೆಸಿ ಶವ ಸಂಸ್ಕಾರ ನಡೆಸಲಾಯಿತು. ಈ ಕುರಿತು ಉದಯವಾಣಿ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದೆ. ಸರ್ಕಾರಿ ಆಸ್ಪತ್ರೆಯ ವೈದ್ಯ ಡಾ॥ ಸೀತಾರಾಂಮಲ್ಯರವರು ಅತ್ಯಂತ ಒರಟು ಸ್ವಭಾವದರಾಗಿದ್ದು ರೋಗಿಗಳನ್ನು ಅಶ್ಲೀಲವಾಗಿ ಬೈಯ್ಯುತ್ತಿದ್ದರೆಂಬುದು ಇಲ್ಲಿನ ಜನಾಭಿಪ್ರಾಯವಾಗಿದೆ. ಈ ಆಸ್ಪತ್ರೆಯ ಅವ್ಯವಸ್ಥೆ ಬಗ್ಗೆ ತನಿಖೆ ನಡೆಸಿ ಜನರ ಪ್ರಾಣ ರಕ್ಷಿಸಬೇಕೆಂದು ಮಾರ್ಚ್ 28ರಂದು ವಿವಿಧ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆಯೊಂದನ್ನು ನಡೆಸಿ ಬಹಿರಂಗಸಭೆ ನಡೆಸಲಾಯಿತು. ತಹಶೀಲ್ದಾರ್‌ರವರಿಗೆ ಮನವಿಯೊಂದನ್ನು ಅರ್ಪಿಸಿ ಘಟನೆ ಕುರಿತು ತನಿಖೆ ನಡೆಸಲು ಒತ್ತಾಯಿಸಲಾಯಿತು. ಈ ಸಭೆಯಲ್ಲಿ ಕಾ॥ ಕಾಳಪ್ಪಪೂಜಾರಿ, ಸುಭಾಷ್‌ಪೂಜಾರಿ ಸಿ.ನಾರಾಯಣ, ಶಿವಾನಂದಕೋಡಿ, ವಿ.ನರಸಿಂಹ ಮುಂತಾದವರು ಮಾತನಾಡಿದರು.

ಬೆಂಗಳೂರಿನಲ್ಲಿ ಸಮಗ್ರತೆಯ ಉತ್ಸವ

'ಸಮುದಾಯ' ಸಂಘಟನೆ ರಾಜ್ಯ ವ್ಯಾಪಿಯಾಗಿ ಬೀದಿ ನಾಟಕೋತ್ಸವವನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಏಪ್ರಿಲ್ 12ರಿಂದ 16ರವರೆಗೆ ನಾಲ್ಕು ದಿನಗಳ ಸಮಗ್ರತಾ ಉತ್ಸವವನ್ನು ಯೋಜಿಸಿದೆ. ದಿನಾಂಕ 12ರಂದು ಚಿತ್ರನಟ ಅನಂತ್‌ನಾಗ್ ಉದ್ಘಾಟಿಸುತ್ತಿರುವ ಈ ಉತ್ಸವ ರವೀಂದ್ರ ಕಲಾಕ್ಷೇತ್ರದ ಬಳಿ ಇರುವ ಸಂಸ ರಂಗಬಯಲು ಮಂದಿರದಲ್ಲಿ ನಡೆಯಲಿದೆ. ದಿ. 13ರಂದು ಅಭಿವ್ಯಕ್ತಿ ಸ್ವಾತಂತ್ರ್ಯ 14ರಂದು ಕೋಮು ಸೌಹಾರ್ದತೆ ಹಾಗೂ ದಿ. 15 ರಂದು ಬರಹಗಾರ ಮತ್ತು ರಾಷ್ಟ್ರೀಯ ಸಮಗ್ರತೆ ಬಗ್ಗೆ ವಿಚಾರ ಸಂಕಿರಣಗಳು ನಡೆಯಲಿವೆ. ಈ ವಿಚಾರ ಸಂಕಿರಣದಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷ ಬಿ.ವಿ.ವೈಕುಂಠ ರಾಜು ಸೇರಿದಂತೆ ಜಿ.ಕೆ. ಗೋವಿಂದರಾವ್, ಡಾ॥ ಕೆ.ಮರುಳ ಸಿದ್ದಪ್ಪ, ಬರಗೂರು ರಾಮಚಂದ್ರಪ್ಪ, ಕವಿ ಸು.ರಂ.ಎಕ್ಕುಂಡಿ ವಿ.ಜಿ.ಕೆ.ನಾಯರ್ ಮೊದಲಾದ ಪ್ರಮುಖರು ಭಾಗವಹಿಸಲಿದ್ದಾರೆ.

ಹಾಷ್ಮಿಯವರ ಮೇಲೆ ಧಾಳಿ ನಡೆದ ಸಮಯದಲ್ಲಿ ಅಭಿನಯಿಸುತ್ತಿದ್ದ 'ಹಲ್ಲಾಬೋಲ್' ಹಾಗೂ ಇತರ ಹಾಷ್ಮಿ ಹಾಗೂ ಜನನಾಟ್ಯಮಂಚ್‌ದ ಕೃತಿಗಳಾದ 'ಕಳ್ಳ ಕೊತ್ವಾಲನಾದರೆ, 'ಯಂತ್ರಗಳು, ಹತ್ಯಾರೆ' ಹಾಷ್ಮಿಯವರ ಜೀವನವನ್ನು ರಂಗ ರೂಪಕ್ಕಿಳಿಸಿದ 'ಒಡನಾಡಿ' ಕೂಡ ರಂಗದ ಮೇಲೆ ಬರಲಿವೆ. ಬಳ್ಳಾರಿ ಜಿಲ್ಲೆಯ 5 ಘಟಕಗಳು, ರಾಯಚೂರು ಜಿಲ್ಲೆಯ ನಾಲ್ಕು ಘಟಕಗಳು, ಚಿತ್ರದುರ್ಗ ಹಾಗೂ ದ.ಕ. ಜಿಲ್ಲೆಗಳಿಂದ ತಲಾ ಎರಡು ಘಟಕಗಳು, ಬೆಂಗಳೂರು, ಕೋಲಾರ, ಮೈಸೂರು, ಬೀದರ್, ಗುಲ್ಬರ್ಗಾ ಜಿಲ್ಲೆಗಳಿಂದ ಒಂದೊಂದು ಘಟಕವೂ ಸೇರಿ 18 ಘಟಕಗಳು 18 ಬೀದಿನಾಟಕಗಳನ್ನು ಪ್ರದರ್ಶಿಸಲಿವೆ. ಹಿಂದಿ, ತಮಿಳು, ಭಾಷೆಗಳ ನಾಟಕಗಳೊಡನೆ ವಿವಿಧ ಹೋರಾಟಗಳ ನಡುವೆ ಸ್ಥಳೀಯವಾಗಿ ರೂಪುಗೊಂಡ ಬೀದಿ ನಾಟಕಗಳು ಬರಲಿವೆ.

ನಾಟಕದ ಸಮಾರೋಪ ಸಮಾರಂಭ ಹೊಂಬೇಗೌಡ ಆಟದ ಮೈದಾನದಲ್ಲಿ ನಡೆಯಲಿದೆ.

ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ಕರೆ

ಅಸಂಘಟಿತ ಕಾರ್ಮಿಕರ ಪರಿಸ್ಥಿತಿ ಶೋಚನೀಯವಾಗಿದೆ. ಎಂಟು ಗಂಟೆ ಕೆಲಸದ ನಿಯಮ, 1000 ರೂ. ಕನಿಷ್ಠ ವೇತನ ಹಾಗೂ ಇತರ ಕಾನೂನುಬದ್ಧ ಸೌಲಭ್ಯಗಳಿಗಾಗಿ ಕಾರ್ಮಿಕರು ಸಂಘಟಿತರಾಗಿ ಹೋರಾಡಬೇಕೆಂದು ಕಾ॥ ಎಸ್. ಸೂರ್ಯನಾರಾಯಣರಾವ್ ಕರೆ ನೀಡಿದರು.

ಬೆಂಗಳೂರು ನಗರದ ಮಾಗಡಿರಸ್ತೆ, ರಾಜಾಜಿನಗರದಲ್ಲಿರುವ ಸ್ಕ್ರೀಟ್ ಟ್ರೇಡರ್ಸ್ ಹಾಗೂ ಜಿ.ಜಿ.ಎಕ್ಸ್‌ಪೋರ್ಟ್ ಕಾರ್ಮಿಕರು ನಡೆಸುತ್ತಿರುವ ಧರಣಿ ಸತ್ಯಾಗ್ರಹ ಅಂಗವಾಗಿ ಏರ್ಪಡಿಸಿದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಂಘ ರಚಿಸಿಕೊಂಡು ತಮ್ಮ ಸೌಲಭ್ಯಗಳನ್ನು ಒತ್ತಾಯಿಸಿದ ಕಾರ್ಮಿಕರನ್ನು ವಿನಾಃ ಕಾರಣ ಕೆಲಸದಿಂದ ತೆಗೆದಿರುವ ಮಾಲೀಕರ ಕುತಂತ್ರದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಇತ್ತೀಚೆಗೆ ಜಿ.ಜಿ. ಎಕ್ಸ್‌ಪೋರ್ಟ್ ಮಾಲೀಕರಿಗೂ ಸಿ.ಐ.ಟಿ.ಯು. ಸಂಘದ ನಡುವೆ ಒಪ್ಪಂದವೊಂದು ಏರ್ಪಟ್ಟಿದೆ. ಸ್ಕ್ರೀಟ್ ಟ್ರೇಡರ್ಸ್ ಮಾಲೀಕ ಮಾತುಕತೆಗೆ ಮೊನ ಮೇಷ ನೋಡುತ್ತಿರುವುದನ್ನು ಸಂಘ ಖಂಡಿಸಿದೆ.

ಬಹಿರಂಗಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಎಸ್.ಆರ್. ಆರಾಧ್ಯ, ಅಧ್ಯಕ್ಷ ಗಣಪತಿ ಹೆಗಡೆ, ಸಂಘದ ಕಾರ್ಯದರ್ಶಿ ಕಾ॥ ಶಾಂತಕುಮಾರಿ ಹಾಗೂ ಕಾರ್ಯಾಧ್ಯಕ್ಷ ಪಿ.ಕೆ.ಸುಬ್ರಮಣಿಯವರು ಮಾತನಾಡಿದರು.

ಬಿಜಾಪುರ ಜಿಲ್ಲಾ ರೈತ 4ನೇ ಸಮ್ಮೇಳನ

ಕರ್ನಾಟಕ ಪ್ರಾಂತರೈತ ಸಂಘದ ಬಿಜಾಪುರ ಜಿಲ್ಲಾ ಸಮ್ಮೇಳನ ಮಾರ್ಚ್ 9 ಮತ್ತು 10ರಂದು ಬಿಜಾಪುರದ ಸಫ್ದರ್ ಹಾಷ್ಮಿ ನಗರದಲ್ಲಿ ಯಶಸ್ವಿಯಾಗಿ ಜರುಗಿತು.

ಜಿಲ್ಲೆಯ ವಿವಿಧ ತಾಲ್ಲೂಕಿನಿಂದ ಬಂದ ರೈತ-ಕೃಷಿ ಕೂಲಿಕಾರರು ನಗರದಲ್ಲಿ ಬೃಹತ್ ಮೆರವಣಿಗೆಯೊಂದನ್ನು ನಡೆಸಿ ಬಸವೇಶ್ವರ ಚೌಕದಲ್ಲಿ ಬಹಿರಂಗಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ರೈತ ಸಂಘದ ರಾಜ್ಯ ಅಧ್ಯಕ್ಷ ಕಾ॥ ಪಿ. ರಾಮಚಂದ್ರರಾವ್‌ರವರು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರ ರೈತರ ಮೇಲೆ 15 000 ಕೋಟಿ ಸಾಲ ಹೊರೆ ಹೊರಿಸಿದ್ದಾರೆ. ಕೈಗಾರಿಕಾ ನೀತಿ ಫಲವಾಗಿ ಕಾರ್ಖಾನೆಗಳು ಮುಚ್ಚುತ್ತಿವೆ. ನಿರುದ್ಯೋಗ ವ್ಯಾಪಕವಾಗಿ ದೇಶ ಇಂದು ದಿವಾಳಿಯಾಗುತ್ತಿದೆ ಎಂದರು. ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ರೈತ ಕಾರ್ಮಿಕ ವರ್ಗ ಬೆಂಬಲಿಸಿ ಪರ್ಯಾಯ ರೂಪಿಸಬೇಕೆಂದು ಕರೆ ನೀಡಿದರು.

ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿಗಳೊಬ್ಬರಾದ ಕಾ॥ ಎನ್. ಕೆ.ಉಪಾಧ್ಯಾಯರವರು ಮಾತನಾಡಿ, ಕೇಂದ್ರ ಸರ್ಕಾರ ರೈಲ್ವೆ ದರ, ಸರಕು ಸಾಗಣಿದರ, ಏರಿಸಿ ಜನ ಸಾಮಾನ್ಯರ ಮೇಲೆ ವಿಪರೀತ ತೆರಿಗೆ ಹೊರೆಗಳನ್ನು ಹಾಕಲಾಗಿದೆ ಎಂದು ಆಪಾದಿಸಿದರು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಹಾಗೂ ರಾಜ್ಯ ಉಪಾಧ್ಯಕ್ಷ ಕಾ॥ ಭೀಮಸಿ ಕಲಾದಗಿಯವರು ಮಾತನಾಡಿ ರೈತರು ಕೊಳ್ಳುವ ಬೀಜ, ಕ್ರಿಮಿನಾಶಕ ಮುಂತಾದ ವಸ್ತುಗಳ ನಕಲಿ ಮಾಲುಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

ಡಿ.ವೈ.ಎಫ್.ಐ.ನ ಕಾ॥ ಮನ್ನುಸಾಬ ಕಲಾದಗಿ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಅಣ್ಣಾರಾಯ ಈಳಗೇರ ಮಾತನಾಡಿದರು.

ನೂತನ ಜಿಲ್ಲಾ ಸಮಿತಿ

ಕಾ॥ ಭೀಮಸಿ ಕಲಾದಗಿ (ಅಧ್ಯಕ್ಷರು), ಕಾ॥ ಶಂಕರಯ್ಯ ಹಿರೇಮಠ ಎ.ಎಚ್.ಹೊನ್ನುಟಗಿ, ಬಸಪ್ಪ ಪರಿಟ, (ಉಪಾಧ್ಯಕ್ಷರು) ಅಣ್ಣಾರಾಯ ಈರಗೇರ (ಪ್ರಧಾನ ಕಾರ್ಯದರ್ಶಿ) ಭೀಮಾ ಶಂಕರ ಬಣ್ಣಾ, ಹಂದಿಗನೂರ (ಸಹಕಾರ್ಯದರ್ಶಿ) ಆರ್.ಎಚ್.ಕಲಾದಗಿ (ಖಜಾಂಚಿ)ಯವರನ್ನೊಳಗೊಂಡ 25 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು. ಕೃಷ್ಣಾ ಮೇಲ್ದಂಡೆ ಯೋಜನೆ ಶೀಘ್ರ ಪೂರ್ತಿಗೊಳಿಸಬೇಕು. ಮುಳವಾಡಯಾತ ನೀರಾವರಿ ಹಿಪ್ಪರಗಿ ಆಣೆಕಟ್ಟು ಜಾರಿಗೊಳಿಸಬೇಕು. ಸರ್ಕಾರಿ ಭೂಮಿ ಸಾಗುವಳಿ ಪತ್ರ, ಬರಪರಿಹಾರ, ಅತಿವೃಷ್ಟಿ ಪರಿಹಾರ ಬೆಳೆಗೆ ಯೋಗ್ಯ ಬೆಲೆ, ರೈತರ ಸಾಲ ಮನ್ನಾ ಮುಂತಾದ ರೈತರ ಬೇಡಿಕೆಗಳ ಕುರಿತು ಸಮ್ಮೇಳನ ನಿರ್ಣಯ ಅಂಗೀಕರಿಸಿತು.

ಸಿಂದಗಿ ತಾಲೂಕು ಸಮ್ಮೇಳನ

ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ॥ ಭೀಮಸಿ ಕಲಾದಗಿಯವರ ಉದ್ಘಾಟನೆ, ಮೋನಸಾಬ ನದಾಫ್‌ರವರ ಧ್ವಜಾರೋಹಣದೊಂದಿಗೆ ಬಿಜಾಪುರ ಜಿಲ್ಲಾ ಸಿಂದಗಿ ತಾಲೋಕು 4ನೇ ಸಮ್ಮೇಳನ ಫೆಬ್ರವರಿ 20ರಂದು ನೆರವೇರಿತು.

ತಾಲೋಕು ಸಂಚಾಲಕ ಕಾ॥ ಅಣ್ಣಾರಾಯ ಈಳಗೇರ ವರದಿ ಮಂಡಿಸಿದರು. ಹೆಚ್ಚುವರಿ ಜಮೀನು ಹಂಚಬೇಕು. ರಸ್ತೆ ನಿರ್ಮಾಣ, ಬಸ್ಸು ಸೌಕರ್ಯ, ಮರದಾಳ ಗ್ರಾಮದ ಕೆರೆ ನಿರ್ಮಾಣ ಮುಂತಾದ ತಾಲೋಕಿನ ರೈತ ಸಮಸ್ಯೆ ಕುರಿತು ಸಮ್ಮೇಳನ ನಿರ್ಣಯ ಅಂಗೀಕರಿಸಿತು.

ನೂತನ ತಾಲೋಕು ಸಮಿತಿಗೆ ಕಾ॥ ಅಣ್ಣಾರಾಯ ಈಳಗೇರ (ಅಧ್ಯಕ್ಷ) ಶಿವನಗೌಡ ಬನ್ನೆಟ್ಟಿ ಪಾಟೀಲ, ಬೋಗಾರ, ಮೋನಸಾಬನದಾಫ್ (ಉಪಾಧ್ಯಕ್ಷರು) ಸಿದ್ದಣ್ಣಾ ಐರೋಡಗಿ (ಕಾರ್ಯದರ್ಶಿ) ವಿರೋಬಾಬ ಸನಾಳ, ನಿಂಗಪ್ಪ ರಾಮತರಾಯ ಹಿಪ್ಪರಗಿ, ಹಿರಗಪ್ಪ ಪೂಜಾರಿ (ಸಹಕಾರ್ಯದರ್ಶಿ)ಗಳು ಮಳಸಿದ್ದಯ್ಯಸ್ವಾಮಿ ಇಂಡಿ (ಖಜಾಂಚಿ) ಹಾಗೂ 9 ಜನ ಸದಸ್ಯರ ಸಮಿತಿ ಆರಿಸಲಾಯಿತು.

ಸಮ್ಮೇಳನದ ಕೊನೆಯಲ್ಲಿ ರೈತರ ಬೃಹತ್ ಮೆರವಣಿಗೆಯೊಂದನ್ನು ನಡೆಸಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾ॥ ಭೀಮಸಿ ಕಲಾದಗಿ, ಅಣ್ಣಾರಾಯ ಈಳಗೇರ, ಮುಂತಾದವರು ಮಾತನಾಡಿದರು.

ಗುಡಿಸಲು ಖಾಯಂಗಾಗಿ ಹೋರಾಟ

ಬಂಗಾರುಪೇಟೆಯ ಕೋಲಾರ ರಸ್ತೆಯಲ್ಲಿರುವ ಸಂಜಯ್‌ಗಾಂಧಿ ಕೊಳಚೆ ಪ್ರದೇಶದಲ್ಲಿ, ಗುಡಿಸಲುಗಳನ್ನು ಹಾಕಿ 1977ರಿಂದಲೂ ವಾಸ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಬಡವರ ಗುಡಿಸಲುಗಳಿಗೆ ಇಂದು ಸಂಚಕಾರ ಬಂದಿದೆ.

ಕೆಲ ರಾಜಕೀಯ ವ್ಯಕ್ತಿಗಳು ಇಲ್ಲಿನ 74 ಗುಡಿಸಲುಗಳಲ್ಲಿ ಈಗಾಗಲೇ 40 ಗುಡಿಸಲುಗಳ ಜನರನ್ನು ಖಾಲಿ ಮಾಡಿಸಿ ಪಕ್ಕದ ಖಾಲಿ ಇರುವ ಜಾಗದಲ್ಲಿ ಬಿಡಾರ ಹೂಡುವಂತೆ ಮಾಡಲಾಗಿದೆ. ಬೆಂಗಳೂರಿನ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ನೋಂದಾವಣೆಯಾಗಿರುವ ಸಂಜಯಗಾಂಧಿ ನಗರ ರಸ್ತೆ ನಿರ್ಮಾಣ ಹಾಗೂ [illegible] ಯನ್ನು [illegible].

ಈ ಜನತೆಯನ್ನು ಸಂಘಟಿಸಿ ಭಾರತ ಪ್ರಜಾಸತ್ತಾತ್ಮಕ ಫೆಡರೇಷನ್ ನೇತೃತ್ವ ವಹಿಸಿ ಹೋರಾಟವನ್ನು ಮುನ್ನಡೆಸಲು ನಿಶ್ಚಿಸಿದೆ. [illegible] ಪತ್ರವನ್ನು ಕೋಲಾರ ಜಿಲ್ಲಾಧಿಕಾರಿಯವರಿಗೆ ನೀಡಿ ಒತ್ತಾಯಿಸಿದೆ.

ಸಫ್ದರ್ ಹಾಶ್ಮಿಯ ಹತ್ಯಾ ಪ್ರಸಂಗ

ಸರ್ವಾಧಿಕಾರಿ ಶಕ್ತಿ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯ ಮುಖಾಮುಖಿಯ ಹಲವು ಮಗ್ಗುಲುಗಳು

ಜಿ.ಎನ್. ನಾಗರಾಜ್

ಸಂಗಾತಿ ಸಫ್ದರ್ ಹಾಶ್ಮಿಯವರ ಹತ್ಯೆ ದೇಶದ ಅನೇಕ ಜನರ ಮನಸ್ಸನ್ನು ಕಲಕಿದೆ, ಆಳವಾದ ಚಿಂತನೆಗೆ ಹಾಗೂ ಅದಕ್ಕೆ ಸರಿಸಾಟಿಯಾದ ಕ್ರಿಯೆಗೆ ತೊಡಗಿಸಿದೆ. ಇದರ ಪರಿಣಾಮವೇ ಇಂದು ದೇಶಾದ್ಯಂತ ಸಫ್ದರ್‌ಹಾಶ್ಮಿಯವರ ಜನ್ಮ ದಿನವನ್ನು 'ಬೀದಿನಾಟಕ ದಿನಾಚರಣೆ'ಯಾಗಿ ದೇಶದ ವಿವಿಧ ಕೇಂದ್ರಗಳಲ್ಲಿ ಆಚರಿಸಲಾಗುತ್ತಿರುವುದು. ೮೯ರ ಹೊಸ ವರ್ಷದ ಉದಯದೊಡನೆಯೇ ದೇಶದ ಜನರೆಲ್ಲರ ಕಿವಿಗೆ ಕೂರ್ಚಿಯಾಗಿ ಬಡಿದ ಈ ಕರಾಳ ವಾರ್ತೆ ಅಸಂಖ್ಯಾತ ಜನ ಸಮುದಾಯದ ಮನವನ್ನು ವ್ಯಾಪಿಸಿರುವ ರೀತಿ, ಹಾಗೂ ಎದ್ದ ರೋಷದ ಪ್ರತಿಭಟನೆಯ ಅಲೆಯ ಆಳ ವಿಸ್ತಾರಗಳು ಆಳುವವರ್ಗವನ್ನು ದಂಗುಬಡಿಸಿದೆ. ದೇಶದ ರಾಜಕೀಯ ಬೆಳವಣಿಗೆಯ ಒಂದು ಪ್ರಮುಖ ಅಂಗವಾಗಿ ಪರಿಣಮಿಸಿದೆ. ಆದ್ದರಿಂದ ಈ ದಾರುಣ ಹತ್ಯೆ ಪ್ರಸಂಗದ ರಾಜಕೀಯ-ಸಾಂಸ್ಕೃತಿಕ ವಿಶ್ಲೇಷಣೆ ವರ್ತಮಾನದ ರಾಜಕೀಯದ ಅವಶ್ಯಕತೆಯಾಗಿದೆ. ಈ ಘಟನೆಯ ವಿವಿಧ ಅಂಶಗಳನ್ನು, ಎಳೆಗಳನ್ನು ಬಿಡಿಸಿ ನೋಡಿದರೆ ದೇಶದ ಜನ ಸಾಮಾನ್ಯರ ಸಂಕಟದ ಆಳದಲ್ಲಿ ಹುದುಗಿದ್ದು, ಇತ್ತೀಚಿನ ದಿನಗಳಲ್ಲಿ ಎದ್ದೆದ್ದು ಬರುತ್ತಿರುವ ನೋವು, ಕಿಚ್ಚುಗಳ ಸ್ವರೂಪವನ್ನು ಕಾಣಬಹುದಾಗಿದೆ. ಈ ಪ್ರಾತಿನಿಧಿಕ ಸ್ವರೂಪವೇ ಆಳುವ ವರ್ಗದ ರೊಚ್ಚಿಗೆ ಹಾಗೂ ಪ್ರತಿಭಟನೆಯ ವ್ಯಾಪಕತೆಗೆ ಕಾರಣವಾಗಿರುವುದು ಎಂಬುದರಿಂದಲೂ ಈ ಪ್ರಸಂಗ ವಿಶ್ಲೇಷಣೆಗೆ ಇನ್ನಷ್ಟು ಪ್ರಾಮುಖ್ಯತೆಯನ್ನು ನೀಡುತ್ತದೆ.

ನಮ್ಮ ದೇಶದಲ್ಲಿ ಸರ್ವಾಧಿಕಾರಿ ಶಕ್ತಿ ಪ್ರಬಲವಾದಂದಿನಿಂದಲೂ ಸರ್ವಾಧಿಕಾರಿಗಳಿಗೂ ಪ್ರಜಾಸತ್ತಾತ್ಮಕ ಶಕ್ತಿಗಳಿಗೂ ನಿರಂತರವಾಗಿ ಸಂಘರ್ಷ ನಡೆಯುತ್ತಲೇ ಇದೆ. ಹಲವು ರಂಗಗಳಲ್ಲಿ ತೀವ್ರ ರೀತಿಯಲ್ಲಿ ನಡೆಯುತ್ತಿರುವ ಈ ಸಂಘರ್ಷದ ಒಂದು, ಸಾವಯವ ಭಾಗವಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿನ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆಯೂ ಧಾಳಿ ನಡೆದಿದೆ. ಸಫ್ದರ್ ಹಾಶ್ಮಿಯವರ ಮೇಲೆ ನಡೆದ ಧಾಳಿಯಲ್ಲಿ, ಸರ್ವಾಧಿಕಾರಿ ಶಕ್ತಿಯ ಬಲಪ್ರದರ್ಶನದ ಅನೇಕ ಅಂಗ ಗಳಾದ ರಾಜಕೀಯ ಹಾಗೂ ಗೂಂಡಾಗಿರಿಯ ನಿಕಟ ಸಂಬಂಧ, ಬಂಡವಾಳಶಾಹಿ ಹಾಗೂ ಗೂಂಡಾಗಿರಿಯ ನಿಕಟ ಸಂಬಂಧ, ಪೊಲೀಸರ. ಶಾಮೀಲು, ಕೇಂದ್ರದ ಅಧಿಕಾರವನ್ನು ಹಿಡಿದ ಸರ್ವಾಧಿಕಾರಿ ಶಕ್ತಿಯ ಕೈವಾಡ-ಗೋಸುಂಬೆತನ ಇವೆಲ್ಲವನ್ನೂ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಕೇಂದ್ರ ಬಿಂದುವಾಗಿ ಬೆಳೆಯುತ್ತಿರುವ ಕಾರ್ಮಿಕ ರಾಜಕಾರಣ, ಸರ್ವಾಧಿಕಾರಿ ಶಕ್ತಿಯ ವಿವಿಧ ಪ್ರಯತ್ನ ಗಳ ವಿರುದ್ಧ ಹೆಚ್ಚು ಹೆಚ್ಚು ಜನ ವಿಭಾಗಗಳು ಎಚ್ಚರವಾಗುತ್ತಿರುವ ಪ್ರಕ್ರಿಯೆಗಳು ಪ್ರತಿಬಿಂಬಿತವಾಗಿದೆ.

ಚುನಾವಣೆಯಲ್ಲಿ ಪ್ರಚಾರದ ಅಂಗವಾಗಿ ನಡೆಯುತ್ತಿದ್ದ ಈ ಸಾಂಸ್ಕೃತಿಕ ಪ್ರದರ್ಶನದ ಮೇಲೆ ಧಾಳಿ ಮಾಡಿದ್ದು ನವದೆಹಲಿಯ ಅಂಚಿನಲ್ಲಿರುವ ಕಾರ್ಮಿಕ ನಗರದಲ್ಲಿ, ಕೈಗಾರಿಕಾ ಮಾಲೀಕರ ಕೈಯಾಳದ ಗೂಂಡಾ ಒಬ್ಬ ನನ್ನು ಕಾಂಗ್ರೆ ತನ್ನ ಸ್ಪರ್ಧಿಯಾಗಿ ಬೆಂಬಲಿಸಿತ್ತು ಎಂಬ ಸಂಗತಿ ಇಂದು ಜನಜನಿತವಾದ ವಿಷಯ. ತನಗೆ ತೊಂದರೆಯಾಗುತ್ತದೆಂದು ಕಂಡೊಡನೆಯೆ ಆ ಸ್ಪರ್ಧಿ ನಮ್ಮ ಪಕ್ಷದವನಲ್ಲ ಎಂದು ವ್ಯಾಮೋಹ ಹತ್ತಿ ಚೀರಿದ್ದೂ ಅಷ್ಟೇ ಅಪಹಾಸ್ಯಕ್ಕೊಳಗಾದ ಸಂಗತಿ. ಆದರೆ ಮುಂದೆ ನ್ಯಾಯಾಂಗ ತನಿಖೆಯಲ್ಲಿ ಪೋಲೀಸರು ಆ ಗೂಂಡಾ ಪರವಾಗಿ ಕೆಲಸ ಮಾಡುತ್ತಿರುವುದು ಸಾಕ್ಷ್ಯಗಳನ್ನು ಸೃಜಿಸಲು ಪ್ರಯತ್ನಿಸುತ್ತಿರುವುದು ಏನನ್ನು ತೋರಿಸುತ್ತದೆ? ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಬಯಸುವ, ಸರ್ವಾಧಿಕಾರವನ್ನು ಹೇರಬಯಸುವ ಸರ್ಕಾರವೊಂದು ಜನತೆಯ ನಿಜವಾದ ಅಭಿಪ್ರಾಯ ಮತಗಣನೆಯ ಮೂಲಕ ವ್ಯಕ್ತವಾಗಲು ಅವಕಾಶ ಕೊಡುವುದಿಲ್ಲ ಮತ್ತು ಮತ್ತವರ ಮಾಫಿಯಾ ವ್ಯವಸ್ಥೆಯೇ ಅಂತಹ ಪ್ರಭುತ್ವದ ಪ್ರತಿನಿಧಿಯಾಗುತ್ತದೆ. ಭಯಂಕರ ವಾತಾವರಣ ಮೂಡುತ್ತದೆ.

ಇಂತಹ ವ್ಯವಸ್ಥೆಯೊಂದು ತನ್ನೆದುರಾಗಿ ಏಳುವ ಪ್ರತಿಯೊಂದು ದನಿಯನ್ನೂ ಹತ್ತಿಕ್ಕಬಯಸುವುದರಲ್ಲಿ ಏನಾಶ್ಚರ್ಯ! ಆದರಲ್ಲಿಯೂ ಕೇವಲ 5 0.000 ದಷ್ಟು ಸದಸ್ಯತ್ವ ಮಾತ್ರವೇ ಇದ್ದರೂ (3 ಲಕ್ಷಕ್ಕೂ ಹೆಚ್ಚು ಜನರ ವಾರಗಟ್ಟಳೆ ಮುಷ್ಕರವನ್ನು ನಡೆಸಲು ಸಮರ್ಥವಾದಾಗ ಮತ್ತು ಅಂತಹ ಯಶಸ್ಸಿನ ಹಿನ್ನೆಲೆಯಲ್ಲಿ ಚುನಾವಣೆಗಳು ನಡೆದಾಗ ಕೈಗಾರಿಕಾ ಮಾಲೀಕರು, ಅವರ ಗೂಂಡಾಗಳೂ, ಅವರೆಲ್ಲರ ರಕ್ಷಕನಾದ ಕಾಂಗ್ರೆ ಪ್ರಭುತ್ವವೇ ಒಟ್ಟಾಗಿ ಮೇಲೆ ಬಿದ್ದರು.

ಇಂತಹ ಪರಿಸ್ಥಿತಿಯಲ್ಲಿ ಜನ ಸಾಮಾನ್ಯರು, ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಈ ಶಕ್ತಿಗಳನ್ನು ಹಿಮ್ಮೆಟ್ಟಿಸುತ್ತಾರೆ ಎಂಬುದಕ್ಕೆ ಈಗಾಗಲೇ 'ಐಕ್ಯರಂಗ'ದ ಪುಟಗಳಲ್ಲಿ ವರದಿಯಾದ ಪ್ರತಿಭಟನೆಯ ಅಲೆ- ಕಾರ್ಮಿಕರು, ಇತರ ಜನ ವಿಭಾಗಗಳು ಅನೇಕ ಸಾಹಿತಿಗಳು, ಪತ್ರಕರ್ತರು, ಕಲಾವಿದರು ಇದು ತಮ್ಮ ಮೇಲೆಯೇ ನಡೆದ ಧಾಳಿಯೆಂದು ಪರಿಗಣಿಸಿದರೇಕೆ ಎನ್ನುವುದನ್ನು ಮಾರ್ಕ್ಸ್‌ವಾದೀ ಕಣ್ಣೋಟ ಸ್ಪಷ್ಟ ಮಾತುಗಳಲ್ಲಿ ವಿವರಿಸುತ್ತದೆ. ಕಲ್ಕತ್ತಾ ಮಹಾಧಿವೇಶನದ ನಿರ್ಣಯ ಇಂತಹ ಪ್ರಕ್ರಿಯೆಯನ್ನು ಮುಂಗಾಣ್ಕೆಯೆಂಬಂತೆ ವಿವರವಾಗಿ ಬಿಡಿಸಿರುವುದನ್ನು ಕಾಣಬಹುದು (ಪಕ್ಕದ ಬಾಕ್ಸ್ ನೋಡಿ)

ಸರ್ವಾಧಿಕಾರ, ಗೂಂಡಾಗಳು ಪ್ರತಿಭಟನೆ, ಇತ್ಯಾದಿ....

ಪ್ರತಿಗಾಮೀ ನೀತಿಗಳಿಂದಾಗಿ ಜನತೆ ಹಾಗೂ ಆಳುವ ಪಕ್ಷದ ನಡುವೆ ತೀವ್ರಗೊಂಡ ವೈರುಧ್ಯಗಳು ಒಂದೆಡೆಯಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ನಿರಂತರ ದಾಳಿಯಲ್ಲಿ ಮತ್ತು ಸರ್ವಾಧಿಕಾರಿ ಕೂಟವನ್ನು ಮತ್ತಷ್ಟು ಬಚ್ಚಿಡುವುದರಲ್ಲಿ, ಮತ್ತೊಂದೆಡೆಯಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳ ಮುಂದುವರಿದ ಅಸ್ತಿತ್ವದಲ್ಲಿ ಹಾಗೂ ಆಳುವ ಪಕ್ಷದ ಧಾಳಿಗೆ ಎಡರಂಗ ಸರ್ಕಾರಗಳ ಪ್ರತಿಭಟನೆಯಲ್ಲಿ ಅಭಿವ್ಯಕ್ತಿ ಪಡೆದಿದೆ.

ಆಳುವ ಪಕ್ಷ ಮತ್ತು ಆಳುವ ವರ್ಗಗಳು ಸುತ್ತೆಲ್ಲಾ ಕಡೆಯಿಂದ ಜನತೆಯ ಪ್ರಜಾಸತ್ತಾತ್ಮಕ ಹಕ್ಕು ರಿವಾಜ್‌ಗಳ ಮೇಲೆ ಧಾಳಿ ಮಾಡದೆ ತನ್ನ ಜನ ವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಮತದಾನದ ಹಕ್ಕು ಮತ್ತು ಲೋಕಸಭೆ ಹಾಗೂ ವಿಧಾನ ಸಭೆಗಳು ಕಾರ್ಯನಿರ್ವಹಣೆ ಮುಂದುವರೆದಿದ್ದರೂ ತಳಮಟ್ಟದಲ್ಲಿ ಪ್ರಜಾಸತ್ತೆಯನ್ನು ತುಳಿಯಲಾಗುತ್ತಿದೆ.

ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮೋಸಗಳು ಕಪ್ಪು ಮಾರುಕಟ್ಟೆಯ ಹಾಗೂ ಕಳ್ಳ ಸಾಗಣೆದಾರರ ಪ್ರಭಾವಗಳು ಕಾಂಗ್ರೆಸ್(ಐ) ನಾಯಕರ ಮೇಲೆ ವಿಫಲಪ್ರಭಾವ ಹೊಂದಿದೆ. ಕ್ರಿಮಿನಲ್‌ಗಳು ಹಾಗೂ ಚಾರ್ಜ್‌ಶೀಟ್ ಪಡೆದವರು ಚುನಾವಣೆಗಳಲ್ಲಿ ಕಾಂಗ್ರೆಸ್ ಸ್ಪರ್ಧಿಗಳ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತಾರೆ.

ಈ ಅಪರಾಧಿಗಳು, ಗೂಂಡಾ ಪಡೆಗಳು ಹಾಗೂ ಪೋಲೀಸರ ವಿರುದ್ಧ ನಿಲ್ಲಬೇಕಾದ ಪ್ರಸಂಗಗಳಲ್ಲಿ ಸಾಮಾನ್ಯ ಮನುಷ್ಯನಿಗೆ ಯಾವುದೇ ಉಳಿಗಾಲವಿಲ್ಲ. ಬಸ್ತಿಗಳು, ದೊಡ್ಡ ನಗರಗಳ ಕೊಳಚೆ ಪ್ರದೇಶಗಳು, ನಗರ ಪಟ್ಟಣಗಳ ಹೊರವಲಯದಲ್ಲಿರುವ ವಾಸ ಸ್ಥಳಗಳನ್ನು ಪೋಲೀಸರ ಬೆಂಬಲದೊಂದಿಗೆ ನೇರವಾಗಿ ಸಮಾಜ ವಿರೋಧಿಗಳ ತಂಡಗಳೇ ಆಳುತ್ತವೆ. ಜನರು ಈ ಸಮಾಜ ವಿರೋಧಿಗಳ ಭಯದ ನೆರಳಲ್ಲಿಯೇ ಬದುಕುತ್ತಾರೆ.

ಕಾಂಗ್ರೆಸ್ ಆಳ್ವಿಕೆಯ ಎಲ್ಲಾ ರಾಜ್ಯಗಳಲ್ಲಿ ಪೋಲೀಸರನ್ನು ಹಾಗೂ ಗೂಂಡಾಗಳನ್ನು ಬಯಲಿಗೆಳೆವ ಧೈರ್ಯ ಮಾಡಿದ ಯಾವುದೇ ಪ್ರಾಮಾಣಿಕ ಧೈರ್ಯವಂತ ಪತ್ರಿಕಾಕರ್ತರ ಜೀವ ಭಯವನ್ನೆದುರಿಸಬೇಕಾಗುತ್ತದೆ.

ಪ್ರತಿಭಟನೆ ಮೂಡುವುದು ಹೇಗೆ?

ಆಡಳಿತದ ಕುಸಿತದಿಂದಾಗಿ ಸಂಘರ್ಷ ಬುಡಮಟ್ಟಕ್ಕೆ ಸಾಮಾನ್ಯವಾಗಿ ರಾಜಕೀಯ ಸಂಘರ್ಷದಲ್ಲಿ ಭಾಗವಹಿಸದ ರಾಜಕೀಯೇತರ ಜನ ವಿಭಾಗಗಳ ಮಟ್ಟಕ್ಕೆ ಒಯ್ಯಲ್ಪಡುತ್ತದೆ. ಹೀಗಾಗಿ ರಾಜಕೀಯ ಬದ್ಧತೆಯಿಲ್ಲದ ಜನ ಸಮುದಾಯವೂ ಎಚ್ಚೆತ್ತು ಪ್ರತಿಭಟನೆಯಲ್ಲಿ ತೊಡಗುತ್ತಿದ್ದಾರೆ.

ಪ್ರಜಾಸತ್ತಾತ್ಮಕ ಚಳುವಳಿಯ ಸಂಘಟಿತ ವಿಭಾಗಗಳಿಂದ ಪ್ರತಿಭಟನೆಯನ್ನೆದುರಿಸಿದಾಗ ಸರ್ವಾಧಿಕಾರಿ ಹೂಟ ತನ್ನ ನಗ್ನ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ರಕ್ತಕಾಣಿಕೆಯ ಅರ್ಪಿಸುತಿದೆ ಬದುಕು

ಸಾಹಿರ್ ಲೂಧಿಯಾನ್ವಿ

(ಅನು-ಅಬ್ದುಲ್ ಮಜೀದ್‌ಖಾನ್)

ನನ್ನ ಜಗತ್ತಿನಲ್ಲಿ ಹೂಬನಗಳನ್ನು ಹುಡುಕುವವನೆ
ಇಲ್ಲಿ ವಸಂತ ಋತುವಿಲ್ಲ, ಚಿಂತಿಮರೀಚಿಕೆಗಳಿವೆ
ಕಾಮನಬಿಲ್ಲ ಬಾಣಗಳಿಲ್ಲ, ಮಬ್ಬುಗತ್ತಲ ಪರಿಸರದಲ್ಲಿ
ದಿಗಂತದಿಂದ ದಿಗಂತದವರೆಗೆ ನೇಣುಗಂಬಗಳಿವೆ

ಉನ್ನತ ಗಣರಾಜ್ಯದ ಆಶ್ವಾಸನೆಯ ತೆರೆಮರೆಯಲ್ಲಿ
ಕಾರಾಗೃಹಗಳ ಉತ್ಥಾನವಿದೆ, ಚಾಟಿ ಏಟುಗಳಿವೆ
ಶಾಂತಿಯ ಹೆಸರಿನಲ್ಲಿ ನಡೆಯುತ್ತಿವೆ ಯುದ್ಧ ಸನ್ನಾಹಗಳು
ನ್ಯಾಯದ ಭರವಸೆಯ ಜೊತೆಗೇ ಬೇಧ ಭಾವದ ಕಾರ್ಖಾನೆಗಳಿವೆ.

ಹೃದಯಗಳ ಮೇಲೆ ದಿಗಿಲ ಪಹರೆ, ತುಟಿಗಳ ಮೇಲೆ ಮೌನ ಮುದ್ರೆ
ತಲೆಗಳ ಮೇಲೆ ಕಾದ ಕಬ್ಬಿಣದ ಸಲಾಕೆಗಳ ಶಾಮಿಯಾನಗಳಿವೆ.

ಸತ್ತಿವೆಯೇ ಎಂದಾದರೂ ಬಲಾತ್ಕಾರ ಹಿಂಸೆಗಳ ತುಳಿತಕ್ಕೆ
ಮೆದುಳುಗಳಿಗೆ ಜೀವ ತುಂಬಿದ ಸಿದ್ಧಾಂತಗಳು ಸಿಕ್ಕು?
ಯಾವ ಕ್ರೂರ ಸೈನ್ಯವಾದರೂ ಈವರೆಗೆ ಧ್ವಂಸ ಮಾಡಿದೆಯೇ
ಮಾನವನ ಎಚ್ಚೆತ್ತ ಆಶ್ಯದ ಕೋಮಲತೆಯನ್ನು?
ಹೆಜ್ಜೆ ಹೆಜ್ಜೆಗೂ ರಕ್ತ ಕಾಣಿಕೆಯ ಅರ್ಪಿಸುತಿದೆ ಬದುಕು
ಕತ್ತಲೊಡನೆ ಹೋರಾಡುವ ಹಣತೆಗಳಿವೆ



ಮುಂದೆ ಸಾಗುತ್ತಿದೆ ಮಾನವನ ವಿಕಾಸದ ಕಾರವಾನ
ಅಗ್ನಿಲೋಹಗಳ ಸರ್ಕಾರದ ಹೃದಯ ನಡುಗಿಸುತ್ತಾ
ಬಂಡಾಯದ ನಗಾರಿಗಳು ಮೊಳಗುತ್ತಿವೆ ಸುತ್ತಲೆಲ್ಲ
ಯುವಜನ ಹೊರ ಬೀಳುತ್ತಿಹರು ಮಶಾಲುಗಳ ಉರಿಸುತ್ತಾ

ನನ್ನ ದನಿಯನ್ನು ಹಿಸುಕುವುದು ಸಾಧ್ಯವಿದೆಯಾದರೂ
ನವಜೀವನದ ಘೋಷಣೆಗಳ ತಡೆಯುವವರ್ಯಾರು?
ಉಕ್ಕು ಬೆಂಕಿಗಳ ಸುತ್ತಗೋಡೆ ಎತ್ತರವಿರಬಹುದು
ಕಾಲಪರಿವರ್ತನೆಯ ವೇಗವನು ತಡೆಯುವವರಾರು?

ಹೊಸ ವಿಚಾರಗಳ ಅಬ್ಬರವನ್ನು ತಡೆಹಿಡಿಯುವವರೇ
ಹೊಸ ಜನಾಂಗದ ಬೀಸುಗತ್ತಿಯನ್ನು ಹಿಡಿಯುವವರಾರು?
ದುರಾಡಳಿತ ಯಾವ ಕಾರಾಗೃಹದ ಕತ್ತಲಾಸರೆಪಡೆವುದೋ
ಅಲ್ಲಿಂದಲೇ ಹೊರ ಬೀಳುವವು ಅರುಣೋದಯದ ಸೇನೆಗ

ವಾತಾವರಣದಲ್ಲಿ ಮೂಡುತ್ತಿರುವ ಕೆಂಬಾವುಟಗಳು
ಸಂಧಿಸತೊಡಗಿವೆ ಪೂರ್ವ-ಪಶ್ಚಿಮಗಳು

ಸಾವಿರ ಸಿಡಿಲು ಬೀಳಲಿ ಲಕ್ಷ ಬಿರುಗಾಳಿಗಳು ಬೀಸಲಿ
ಯಾವ ಹೂಗಳು ಅರಳಬೇಕೆಂದಿವೆಯೋ
ಅವು ಅರಳಿಯೇ ತೀರುವವು!



ಈ ಪ್ರಪಂಚದಲ್ಲಿ ನಡೆಯುವ ಪ್ರತಿಯೊಂದು ಅನ್ಯಾಯಗಳ ವಿರುದ್ಧ ನೀನು ಸೆಡ್ಡುಹೊಡೆದು ನಿಂತರೆ ಆಗ ನೀನು ನನ್ನ 'ಕಾಮ್ರೇಡ್'

— ಚೆಗೆವಾರ

ನಾಟಕ ಪ್ರದರ್ಶಿಸುವ ಹಕ್ಕು

ಜನನಾಟ್ಯಮಂಚ್ ಪ್ರದರ್ಶಿಸಿದ ಬೀದಿ ನಾಟಕವೊಂದರ ಮೇಲೆ ಪೊಲೀಸರು ಧಾಳಿ ನಡೆಸಿ, ನಟರನ್ನು ಹಿಡಿದಿದ ಪ್ರಕರಣವೊಂದರ ನಂತರ ಕ್ರುದ್ಧರಾದ ಸಫ್ದರ್ ಬರೆದ ಲೇಖನ ಇದು.

1986ರಲ್ಲಿ ದಿಲ್ಲಿ ಸಾರಿಗೆ ಸಂಸ್ಥೆ ಬಸ್ ಟಿಕೆಟ್ ದರಗಳನ್ನು ದಿಢೀರನೆ ಏರಿಸಿದ್ದ ರಿಂದ ಮೂಡಿದ ಪ್ರತಿಭಟನೆಯ ಅಲೆಯ ಅಂಗವಾಗಿ ಜನನಾಟ್ಯಮಂಚ್ 'ಟಿಟಿಸಿ ದಾಂಧಲೆ' ಎಂಬ ನಾಟಕವನ್ನು ಪ್ರದರ್ಶಿಸಿತು. ಪೊಲೀಸರು ಈ ಪ್ರತಿಭಟನೆಯ ಮೇಲೆರಗಿದಂತೆಯೇ ಜನನಾಟ್ಯಮಂಚ್‌ದ ನಟರ ಮೇಲೆಯೂ ಎರಗಿದರು. ನಟರು ಹಾಗೂ ಪ್ರೇಕ್ಷಕರ ಮೇಲೆ ಲಾಠಿ ಚಾರ್ಜ್, ಕಲಾವಿದರ ಬಂಧನ, ಠಾಣೆಯಲ್ಲಿ ಇನ್ನೊಮ್ಮೆ ಎಂದೂ ನಾಟಕವಾಡದಂತೆ ಬೆದರಿಕೆ ಮೊದಲಾದ ಪೊಲೀಸ್ ಅಸ್ತ್ರಗಳನ್ನೆಲ್ಲಾ ಉಪಯೋಗಿಸಿದರು. ಪೊಲೀಸರ ಈ ದಮನ ಕಾರಿ ಕ್ರಮವನ್ನು ಖಂಡಿಸಿ ದೆಹಲಿಯ ಪ್ರಮುಖ ಕಲಾವಿದರು ಹಾಗೂ ಅಂದು ದೆಹಲಿಯಲ್ಲಿದ್ದ ಟಿ.ವಿ. ಹಾಗೂ ಸಿನೆಮಾ ಕಲಾವಿದರಾದ ಸಯೀದ್ ಮಿರ್ಜಾ ಹಾಗೂ ಕುಂದನ್ ಶಾಹ ಹೇಳಿಕೆ ನೀಡಿ ದರು. ಇದರ ಜೊತೆಗೆ ಅನೇಕ ಪತ್ರಿಕೆಗಳು ದನಿಗೂಡಿದವು.

ಆ ಸಂದರ್ಭದಲ್ಲಿ 1986 ಫೆಬ್ರವರಿ 16ರ 'ಎಕನಾಮಿಕ್ ಟೈಮ್ಸ್'ನಲ್ಲಿ ಪ್ರಕಟವಾಗಿದ್ದ ಲೇಖನದ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ದೇಶದ ವಿಭಿನ್ನ ಭಾಗಗಳಲ್ಲಿ ರಂಗ ಕಲಾವಿದರ ಮೇಲೆ ಪೊಲೀಸರ ದಬ್ಬಾಳಿಕೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಲೇ ಇದೆ. ದೇಶದ ಒಂದಿಲ್ಲೊಂದು ಭಾಗದಲ್ಲಿ ಬಹುಶಃ ಪ್ರತಿವಾರ ಬೀದಿ ನಾಟಕಗಳ ಸಂಬಂಧವಾಗಿ ಜನರನ್ನು ಬಂಧಿಸಲಾಗುತ್ತಿದೆ. ಇಂತಹದೇ ಒಂದು ಘಟನೆ (1981ರಲ್ಲಿ ಉತ್ತರಪ್ರದೇಶದ ಪೂರ್ವ ಭಾಗದಲ್ಲಿ) ಕಲಾವಿದರು ಒಂದು ಹೋಬಳಿಯ ಬಸ್ ಸ್ಟಾಪಿನಲ್ಲಿ ಇಳಿಯುತ್ತಿದ್ದಂತೆ ಪೊಲೀಸರು ಅವರನ್ನು ಬಂಧಿಸಿ ರಾತ್ರಿಯೆಲ್ಲಾ ಠಾಣೆಯಲ್ಲಿಟ್ಟರು. ಅಲ್ಲಿ ಒಬ್ಬ ಮಹಿಳಾ ಕಲಾವಿದೆಯ ಮೇಲೆ ಪೊಲೀಸರು ಬಲಾತ್ಕಾರವನ್ನು ಕೂಡ ಮಾಡಿದರು. ಬಿಹಾರಿನಲ್ಲಿಯೂ ಬೀದಿನಾಟಕಗಳ ಕಲಾವಿದರನ್ನು ಬಂಧಿಸುವುದು, ಅವರಿಗೆ ಯಾತನೆ ನೀಡುವುದು ಅವರನ್ನು ಅಪರಾಧಿಗಳನ್ನಾಗಿಸಿ ಜೇಲಿನಲ್ಲಿಡುವುದು ಒಂದು ಸಾಮಾನ್ಯ ಮಾತಾಗಿದೆ.

ಜನರ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಒಂದು ಜನಪ್ರಿಯ ಮಾಧ್ಯಮವಾಗಿ ಬೀದಿ ನಾಟಕಗಳು ಉದಯಿಸುತ್ತಿವೆ. ಬಹಳಷ್ಟು ರಾಜ್ಯಗಳಲ್ಲಿ ಇದು ರೈತರ, ಕಾರ್ಮಿಕರ ಮತ್ತು ವಿದ್ಯಾರ್ಥಿಗಳ ಸಂಘಟನೆಯ ಧ್ವನಿಯನ್ನೆತ್ತುವ ಮಾಧ್ಯಮವಾಗಿವೆ. ಪ್ರಗತಿಪರರ ಮತ್ತು ತುಳಿತಕ್ಕೊಳಗಾದವರ ಧ್ವನಿಯಾಗಿರುವುದರಿಂದ ಬೀದಿನಾಟಕಗಳನ್ನು ವ್ಯವಸ್ಥೆ ಮತ್ತು ಕಾನೂನಿನ ರಕ್ಷಕರು ಸಂದೇಹ ಹಾಗೂ ದ್ವೇಷಪೂರಿತ ದೃಷ್ಟಿಯಿಂದ ನೋಡುತ್ತಾರೆ. ಇದೇ ಕಾರಣದಿಂದ ಪೊಲೀಸರು ಇವರನ್ನು ಕಾನೂನು ಮತ್ತು ಆಡಳಿತದ ಸಮಸ್ಯೆಗಳೆಂದು ಪರಿಗಣಿಸಿ ಇವರ ವಿರುದ್ಧ ದಮನಕಾರಿ ನೀತಿಯನ್ನು ಅನುಸರಿಸುತ್ತಾರೆ. ಒಂದು ಉದ್ರಿಕ್ತ ಗುಂಪಿನೊಡನೆ ವ್ಯವಹರಿಸುವ ರೀತಿಯಲ್ಲಿ ಬೀದಿನಾಟಕಗಳೊಡನೆ ವ್ಯವಹರಿಸುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ನಾಟಕ ಪ್ರದರ್ಶನಗಳನ್ನು ನಿಲ್ಲಿಸುವ

ಯಾವ ಕಾನೂನು ಇಲ್ಲದಿದ್ದರೂ ಪೊಲೀಸರು ಬ್ರಿಟಿಷರ ಕಾಲದ ಕ್ರೂರ ಕಾನೂನುಗಳ ಆಸರೆ ಪಡೆಯುತ್ತಾರೆ.

ಬೀದಿನಾಟಕಗಳ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆಯನ್ನು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆಯಿಂದ ಬೇರ್ಪಡಿಸಿ ನೋಡುವ ಅವಶ್ಯಕತೆ ಇಲ್ಲ. ಪ್ರಜಾಸತ್ತಾತ್ಮಕ ಹೋರಾಟಗಳ ಮೇಲೆ ದಬ್ಬಾಳಿಕೆ ನಡೆಯುತ್ತಿರುವ ಸಂದರ್ಭದಲ್ಲೇ ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯ ಹಕ್ಕಿನ ಪ್ರಶ್ನೆ ಕೂಡ ಅದರೊಡನೆ ಸೇರಿಕೊಳ್ಳುತ್ತದೆ.

ಯಾವ 'ಕಲಾವಿದ ಜನರಿಗಾಗಿ ಕಲೆ' ಎಂಬ ಉದ್ದೇಶಕ್ಕೆ ಬದ್ಧನಾಗಿರುವನೋ ತನ್ನ ರಚನೆಯನ್ನು ಜನ ಸಮುದಾಯಕ್ಕೆ ಮುಟ್ಟಿಸುವ ಆಶಯ ಉಳ್ಳವನಾಗಿರುವನೋ, ಸ್ವಾಭಾವಿಕವಾಗಿ ಬೀದಿನಾಟಕಗಳತ್ತ ಆಕರ್ಷಿತನಾಗುತ್ತಾನೆ. ರಂಗ ಮಂದಿರಗಳಲ್ಲಿ ಕಡಿಮೆ ಸಂಖ್ಯೆ ಹಾಗೂ ಆಗುವ ಖರ್ಚಿನಿಂದಾಗಿ ರಂಗ ನಾಟಕಗಳು (ಪ್ರೊಸೆನಿಯಮ್) ಪಟ್ಟಣ ನಿವಾಸಿಗಳ ಒಂದು ಭಾಗವನ್ನು ಮಾತ್ರ ಆಕರ್ಷಿಸಬಲ್ಲವು. ಒಬ್ಬ ನಟನಾಗಲಿ, ನಿರ್ದೇಶಕನಾಗಲಿ, ನಾಟಕಕಾರನಾಗಲಿ ಅಥವಾ ಗಾಯಕನಾಗಲಿ ಬೀದಿ ನಾಟಕಗಳ ಮುಖಾಂತರ ತನ್ನ ಪ್ರೇಕ್ಷಕರನ್ನು ನೇರವಾಗಿ ತಲುಪುವುದರಿಂದ, ಅದರ ಪ್ರಭಾವದ ಕ್ಷೇತ್ರ ವಿಸ್ತಾರವಾಗಿರುವುದರಿಂದ ಬೀದಿ ನಾಟಕಗಳತ್ತ ಹೆಚ್ಚಿಗೆ ಆಕರ್ಷಿತನಾಗುತ್ತಾನೆ. ಬಹಳ ಜನ ಒಂದೆಡೆ ಸೇರುವ ಸಾರ್ವಜನಿಕ ಸ್ಥಳಗಳಲ್ಲಿ ತನ್ನ ನಾಟಕಗಳನ್ನು ಪ್ರದರ್ಶಿಸುತ್ತಾನೆ.


ಸಾರ್ವಜನಿಕ ಉದ್ಯಾನವನ, ಸಂತೆ, ಬಸ್‌ಸ್ಟಾಪ್, ಗಲ್ಲಿಗಳು, ಉದ್ದಿಮೆಗಳ ಸ್ಥಳ ಇವುಗಳನ್ನು ಬೀದಿನಾಟಕಗಳ ರಂಗ ಶಾಲೆಗಳೆನ್ನಬಹುದು. ಆದ್ದರಿಂದ ಪೊಲೀಸರು ಕಾನೂನು ಮತ್ತು ಆಡಳಿತೆಯ ಹೆಸರಿನಲ್ಲಿ ಈ ಸ್ಥಳಗಳಲ್ಲಿ ಬೀದಿನಾಟಕಗಳನ್ನಾಡುವುದನ್ನು ತಡೆದರೆ ಈ ರಂಗಗಳೆಲ್ಲಿ ಹೋಗಬೇಕು? ಅಪ್ರತ್ಯಕ್ಷವಾಗಿ ಪೊಲೀಸರು ಬೀದಿನಾಟಕ ಕಲಾವಿದರಿಗೆ ತಮ್ಮ ಕಾರ್ಯಕ್ರಮಗಳನ್ನು ನಿಲ್ಲಿಸಲು ಹೇಳಿದ ಹಾಗೆ ಆಗುವುದು. ಇದು ಕಲಾವಿದನಿಗೆ ತನ್ನ ಕಲೆಯನ್ನು ಜನರ ಸಮ್ಮುಖದಲ್ಲಿ ಪ್ರದರ್ಶಿಸಲು ಇರುವ ಹಕ್ಕನ್ನು ಹಾಡುಹಗಲೇ ಕಸಿದಂತಾಗುವುದು.

ಪೊಲೀಸರು ಸುಳ್ಳು ಔಷಧಗಳನ್ನು ಮಾರುವ ಬೀದಿ ವೈದ್ಯರನ್ನು ಹಿಡಿಯುವುದಿಲ್ಲ, ಹಾವಾಡಿಗರನ್ನು ತಡೆಯುವುದಿಲ್ಲ, ಡೊಂಬರಾಟ ಆಡುವವರನ್ನು ನಿಲ್ಲಿಸುವುದಿಲ್ಲ. ಅಲ್ಲದೇ ಅವರ ದಿನನಿತ್ಯ ಗಳಿಕೆಯ ಭಾಗವನ್ನು ಕೂಡ ಕಸಿಯುತ್ತಾರೆ. ರಸ್ತೆ ಸಂಚಾರದಲ್ಲಿ ತಡೆಯಾಗುವುದೆಂದು ಬೀದಿ ನಾಟಕದವರನ್ನು ಪೊಲೀಸರು ಹಿಡಿಯುವುದಿಲ್ಲ, ಹಾಗೆ ನೋಡಿದರೆ ಇದುವರೆಗೆ ಹಾಗಾದುದಿಲ್ಲ. ಅವರು ಬೀದಿ ನಾಟಕಗಳನ್ನು ತಡೆಯಲು ನಿಜವಾದ ಕಾರಣ ಅವು ಸ್ವಭಾವತಃ ರಾಜಕೀಯ ನಾಟಕಗಳಾದ್ದರಿಂದ. ಅವುಗಳು ಆಯಾ ಕಾಲದ ಸಮಸ್ಯೆಗಳನ್ನೆತ್ತಿ ಪ್ರೇಕ್ಷಕರೆದುರು ಅವುಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡುತ್ತಾವಾದ್ದರಿಂದ. ಬೀದಿ ನಾಟಕಗಳನ್ನು ದಮನ ಮಾಡುವಲ್ಲಿ ಪೊಲೀಸರು ವ್ಯವಸ್ಥೆಯ ಹಿತರಕ್ಷಕರಾಗುತ್ತಾರೆ ಯಾಕೆಂದರೆ ಸರ್ಕಾರ ಜನತೆಯ ಅಸಮಾಧಾನ ಮತ್ತು ವಿರೋಧದ ಬಗ್ಗೆ ಹೆಚ್ಚು ಹೆಚ್ಚು ಅಸಹನೆಯನ್ನು ತೋರುತ್ತಲಿದೆ.

ಪೊಲೀಸರ ಅಸಹನೆ ಹೆಚ್ಚುತಲಿದ್ದರೂ ಬೀದಿ ನಾಟಕಗಳ ಕಲಾವಿದರನ್ನು ರಕ್ಷಿಸುವಲ್ಲಿ ಸಾಮಾನ್ಯ ಜನತೆ ಮತ್ತು ಕಲಾವಿದರು ನಿರಂತರವಾಗಿ ಬೆಂಬಲಕ್ಕೆ ಬರುತ್ತಿದ್ದಾರೆ ಎನ್ನುವದೂ ಅಷ್ಟೇ ಸತ್ಯವಾಗಿದೆ. ಬೀದಿ ನಾಟಕಗಳೊಡನೆ ನೇರವಾದ ಸಂಬಂಧವಿಲ್ಲದ ಕಲಾವಿದರೂ ಇವರಲ್ಲಿ ಸೇರಿದ್ದಾರೆ. ಕೊನೆಯಲ್ಲಿ ಸಾಮಾನ್ಯ ಜನತೆ ಬೀದಿ ನಾಟಕಗಳನ್ನು ರಕ್ಷಿಸುವದಾದರೂ ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚು ಸಕ್ರಿಯವಾಗಿ ಜನತೆಯ ಎದುರು ನಮ್ಮ ಕಲೆಯನ್ನು ಪ್ರದರ್ಶಿಸುವ ಹಕ್ಕಿನ ರಕ್ಷಣೆಗಾಗಿ ದುಡಿಯಬೇಕಾಗಿದೆ. ಜನನಾಟ್ಯಮಂಚದ ಇಬ್ಬರು ನಟರನ್ನು ಬಂಧಿಸಿದಾಗ ಅದರ ವಿರುದ್ಧ ದಿಲ್ಲಿಯ ಕಲಾವಿದರು ವ್ಯಕ್ತಪಡಿಸಿದ ತೀವ್ರ ಪ್ರತಿಕ್ರಿಯೆ ಈ ಸಮಸ್ಯೆಗೆ ಒಂದು ಅಂತಿಮ ಪರಿಹಾರವನ್ನು ಕಂಡುಕೊಳ್ಳುವತ್ತ ಸಾಗುವಂತೆ ಮಾಡಿದೆ.

ಅನು-ಶ್ರೀಕಾಂತ್ ಕಕ್ಕೆರಿ





ಸ್ವಾತಂತ್ರ್ಯ: ಹಾಷ್ಮಿಗೊಂದು ಕಾಣಿಕೆ

ಎಂ.ಎಫ್.ಹುಸೇನ್‌ರ ಚಿತ್ರ 10ಲಕ್ಷಕ್ಕೆ ಮಾರಾಟ

ಸಫ್ದರ್ ಹಾಷ್ಮಿ ಎಲ್ಲರ ಮನದಲ್ಲಿ ಉಳಿಯುವ ಗೀತೆ. ಎದೆಯ ಬಡಿತಗಳಿಗೆ ಶಬ್ದ ನೀಡಿದಾತ. ಹಲವರ ಸಿಟ್ಟು, ನೋವುಗಳಿಗೆ ದನಿ ನೀಡಿದಾತ.

ಕಲಾಪ್ರಪಂಚಕ್ಕೆ ಒಂದು ಅಮೂಲ್ಯ ಕಾಣಿಕೆಯಾದ ಸಫ್ದರ್ ಹಾಷ್ಮಿಗೆ ಖ್ಯಾತ ಕಲಾವಿದ ಎಂ.ಎಫ್.ಹುಸೇನ್ ವಿಶಿಷ್ಟ ರೀತಿಯ ಕಾಣಿಕೆ ಸಲ್ಲಿಸಿದರು.

ಕಲೆಯ ಒಡನಾಡಿ ಹಾಷ್ಮಿಯ ಸಾವು ನನ್ನನ್ನು ತಲ್ಲಣಿಸಿದೆ" ಎನ್ನುವ ಎಂ.ಎಫ್.ಹುಸೇನ್ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ 'ಸ್ವಾತಂತ್ರ್ಯ: ಹಾಷ್ಮಿಗೊಂದು ಕಾಣಿಕೆ' ಎಂಬ ಹೆಸರಿನಲ್ಲಿ ಬೃಹತ್ ಚಿತ್ರವೊಂದನ್ನು ರಚಿಸಿದರು.

ಇತ್ತೀಚೆಗೆ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಮುಂಬೈನಲ್ಲಿ ಬೃಹತ್ ಕಲಾಪ್ರದರ್ಶನ ಹಾಗೂ ಮಾರಾಟ ಕಾರ್ಯಕ್ರಮ ಏರ್ಪಡಿಸಿತ್ತು. ಪ್ರದರ್ಶನಕ್ಕಿಟ್ಟಿದ್ದ 35 ಕಲಾಕೃತಿಗಳ ಮಧ್ಯೆ ಹುಸೇನ್‌ರ 'ಸಫ್ದರ್ ಹಾಷ್ಮಿ' ಕಲಾಕೃತಿಯು 10 ಲಕ್ಷ ರೂ.ಗಳಿಗೆ ಮಾರಾಟವಾಯಿತು.

ಕರ್ನಾಟಕದಲ್ಲಿ

ಸಾಂಸ್ಕೃತಿಕ ರಂಗದ ಮೇಲೆ ಆಳುವ ಪ್ರಭುತ್ವದ ಹಲ್ಲೆ ಸದಾ ಸಾಗುತ್ತಲೇ ಬಂದಿದೆ. ಪೊಲೀಸರು, ಅಧಿಕಾರಿಗಳು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೆ. ಕಾನೂನಿಲ್ಲದ ಪಕ್ಷದಲ್ಲಿ ಹೊಸ ಕಾನೂನು ಸೃಷ್ಟಿಸುತ್ತಾರೆ.

ನಾಟಕ, ಚಲನಚಿತ್ರ, ಸಾಹಿತ್ಯವನ್ನು ತಮ್ಮ ತಹಬಂದಿಗೆ ತೆಗೆದುಕೊಳ್ಳುವ ಈ ಯತ್ನ ಯಶಸ್ವಿಯಾಗಿಲ್ಲ ಎಂಬ ಮಾತು ಬೇರೆ.

ಕರ್ನಾಟಕದಲ್ಲೂ ಈ ಬಿಸಿ ಹಲವಾರು ಬಾರಿ ತಾಗಿದೆ. ಬ್ರಿಟಿಷರು ನಾಟಕಗಳ ಮೇಲೆ ಸದಾ ಹದಿನಕಣ್ಣುಗಳನ್ನಿಟ್ಟಿದ್ದರು. ಆದರೂ ಸಹ 'ಕಂಪನಿ'ಗಳು ಬ್ರಿಟಿಷರ ವಿರುದ್ಧದ ನಾಟಕಗಳನ್ನು ಪ್ರದರ್ಶಿಸಲು ಹಿಂದೆ ಬೀಳಲಿಲ್ಲ. ಬೆಳಗಾವಿಯ ಕಲಾವೈಭವ ನಾಟಕ ಸಂಸ್ಥೆ 'ಕಿತ್ತೂರು ರಾಣಿ ಚನ್ನಮ್ಮ' ನಾಟಕವನ್ನು ಪ್ರದರ್ಶಿಸುವಾಗ ಅದರಲ್ಲಿ ರಾಜಕೀಯ ವಾಸನೆಯಿದೆ ಎಂದು ಆಕ್ಷೇಪ ವ್ಯಕ್ತಪಡಿಸಿ ನಾಟಕ ಪ್ರದರ್ಶನ ಮಧ್ಯದಲ್ಲಿಯೇ ಅದನ್ನು ನಿಲ್ಲಿಸಲಾಗಿತ್ತು. ವೀರರಾಣಿಯ ಪಾತ್ರವಹಿಸಿದ್ದ ವಣಗಿಬಾಳಪ್ಪ ನೇರವಾಗಿ ಸೀರೆ ಕುಬಸದಲ್ಲಿಯೇ ಪೊಲೀಸ್ ಠಾಣೆಗೆ ತೆರಳಿ ಅವರಿಗೆ ಛೀಮಾರಿ ಹಾಕಿದ್ದರು.

ಗುಂಡೂರಾಯರ ಸರ್ಕಾರ ಪತ್ರಿಕಾಲಯ ಕಛೇರಿಗಳಿಗೆ ಬೀಗ ಹಾಕಿದಂತೆ ನಾಟಕ ಪ್ರದರ್ಶನಗಳಿಗೂ ಬೀಗ ಹಾಕುವ ಸನ್ನಾಹ ನಡೆಸಿತು. ನಾಟಕಗಳ ರಾಜಕೀಯ ಸೂಜಿಂದ ಬೆಚ್ಚಿದ ಗುಂಡೂರಾಯರ ಸರ್ಕಾರ ನಾಟಕ ಪ್ರದರ್ಶನಕ್ಕೆ ಮುಂಚೆ ನಾಟಕದ ಹಸ್ತಪ್ರತಿ ಸಲ್ಲಿಸಿ ಒಪ್ಪಿಗೆ ಪಡೆಯಬೇಕು ಎಂಬ ಕಾನೂನು ಸೃಷ್ಟಿಸಿತು. ಕರ್ನಾಟಕ ರಂಗ ಚಳುವಳಿಯ ಪ್ರಗತಿ ಪರ ಶಕ್ತಿಗಳು ಸಂಘಟಿತವಾಗಿ ಇದನ್ನು ಪ್ರತಿಭಟಿಸಿತ್ತು. "ಸೃಜನಶೀಲ ಸಾಹಿತ್ಯದ ಒಂದು ಪ್ರಕಾರದ ಗುಣಾವಗುಣಗಳನ್ನು ಕೇವಲ ಒಬ್ಬ ಪೊಲೀಸ್ ನಿರ್ಧರಿಸಿಬಿಡಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ಎತ್ತಿದವು.

ನಂತರ ಗುಂಡೂರಾಯರ ದೃಷ್ಟಿ ಬಿದ್ದದ್ದು ಪೋಸ್ಟರ್ ಹಾಗೂ ಗೋಡೆ ಬರಹಗಳತ್ತ. ಯಾವುದೇ ಭಿತ್ತಿ ಪತ್ರ ಅಂಟಿಸಲು ಸರ್ಕಾರದ ಪರವಾನಗಿ ಬೇಕು. ಸರ್ಕಾರ ಸಮ್ಮತಿಸದ ಭಿತ್ತಿಪತ್ರ ಅಂಟಿಸಕೂಡದು ಎಂಬ ಕಾನೂನು ಜಾರಿಗೆ ಬಂದಿತು. ಎಡ ಪಕ್ಷಗಳ ಮುಖ್ಯವಾದ ಅಸ್ತ್ರ ಭಿತ್ತಿಪತ್ರ ಹಾಗೂ ಗೋಡೆ ಬರಹಗಳೇ ಎಂಬುದು ಗುಂಡೂರಾಯರಿಗೆ ತಿಳಿದಿತ್ತು. ಈ ನಿಷೇಧದಿಂದ ಎಡ ಪಕ್ಷಗಳ ಕಾರ್ಯಕ್ರಮವನ್ನೇ ಅಡಗಿಸುವ ಯತ್ನ ಸರ್ಕಾರದ್ದು. ಎಡ ಪಕ್ಷಗಳು ಹಿಂಜರಿಯಲಿಲ್ಲ. ಹಾಗೆಯೇ ಗೋಡೆಗಳಿಂದ ಬರಹಗಳು, ಭಿತ್ತಿಪತ್ರಗಳೂ ಮರೆಯಾಗಲಿಲ್ಲ.

ಬೀದಿನಾಟಕಗಳ ಮೇಲೆ ಈ ಕಾನೂನಿನ ಹಲ್ಲೆ ಅಪಾರ. 'ಸಮುದಾಯ' ಜಾಥಾ ವೇಳೆಯಲ್ಲಿ ಮೊದಲು ಪೊಲೀಸ್ ಠಾಣೆ ನಂತರ ಬೀದಿ ಎನ್ನುವಂತಾಗಿತ್ತು. ಜನರ ನೋವಿನ ಗೀತೆಗೆ ದನಿಯಾದರೆ ಸಾಕು ಪೊಲೀಸರು ಹಾಜರಾಗುತ್ತಿದ್ದರು. ಅನೇಕ ನಾಟಕ ಪ್ರದರ್ಶನಗಳನ್ನು ಮಧ್ಯದಲ್ಲಿಯೇ ನಿಲ್ಲಿಸಲಾಗಿದೆ. ಮತ್ತೆ ಕೆಲವನ್ನು ಆರಂಭಿಸಲು ಅಡ್ಡಿ ಮಾಡಿದ್ದರು. ಪೊಲೀಸ್ ಪರವಾನಗಿ ಪಡೆದೇ ತೀರಬೇಕು ಎನ್ನುವ ಕಡ್ಡಾಯ ಹೇರಲಾಗಿದೆ.

ಸಾರಿಗೆ ನೌಕರರಿಂದ ತ್ರಿಪುರಾ ದಿನಾಚರಣೆ

ತ್ರಿಪುರಾದಲ್ಲಿ ಕಾಂಗ್[illegible]ಜೆ. ಎಸ್.ನ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ವಿರೋಧಿಸಿ ಅಖಿಲ ಭಾರತ ರಸ್ತೆ ಸಾರಿಗೆ ನೌಕರರ ಒಕ್ಕೂಟ ನೀಡಿದ ಕರೆಯಂತೆ ದ.ಕ. ಜಿಲ್ಲೆಯ ಮಂಗಳೂರಿನಲ್ಲಿ, ಸಾರಿಗೆ ನೌಕರರು ಮಾರ್ಚ್ 15 ರಂದು ತ್ರಿಪುರಾ ದಿನಾಚರಣೆ ಆಚರಿಸಿದರು.

ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಪ್ರ. ಕಾರ್ಯದರ್ಶಿ ಕಾ॥ ಬಿ.ಮಾದವರವರು ತ್ರಿಪುರಾದಲ್ಲಿ ಎಡ ಪಕ್ಷಗಳ ನಾಯಕರನ್ನು ಕಾರ್ಯಕರ್ತರನ್ನು ಹಾಗೂ ಸಾರಿಗೆ ನೌಕರರನ್ನು ಕೊಲ್ಲಲಾಗುತ್ತಿದೆ. ಸಾರಿಗೆ ನೌಕರ ಸಂಘಗಳ 17 ಕಛೇರಿಗಳನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲಾಗಿದೆ. ಅಲ್ಲಿನ ದುಡಿಯುವ ಜನರು ದಿನನಿತ್ಯ ಭಯಾನಕ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಡುತ್ತಿರುವ ತ್ರಿಪುರಾ ಸಂಗಾತಿಗಳಿಗೆ ಎಲ್ಲ ರೀತಿಯ ನೆರವು ನೀಡಬೇಕೆಂದು ಅವರು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷ ಕಾ॥ ಕೆ.ಮೂಸಬ್ಬ ವಹಿಸಿ ಮೋಟರ್ಸ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕ್ಸ್ ಯೂನಿಯನ್‌ನ ಪ್ರ. ಕಾರ್ಯದರ್ಶಿ ಕಾ॥ ಉಮೇಶ್ ವಂದಿಸಿದರು.

ಸಭೆಗೆ ಮುನ್ನ ಮಂಗಳೂರು ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಾರ್ವಜನಿಕರಿಂದ 'ತ್ರಿಪುರಾ ಸಹಾಯಧನ'ವನ್ನು ಸಂಗ್ರಹಿಸಲಾಯಿತು.

ಕೃಷಿ ಕಾರ್ಮಿಕರ ಧರಣಿ

ಕೃಷಿ ಕೂಲಿಗಾರರು 5 ಅಂಶದ ಬೇಡಿಕೆಗಳಿಗಾಗಿ ದೇಶ ವ್ಯಾಪಿ ಚಳುವಳಿ ನಡೆಸಲು ನೀಡಿದ ಕರೆಯಂತೆ ಮಾರ್ಚ್ 11ರಂದು ಕುಂದಾಪುರ ತಾಲ್ಲೂಕಿನ 12 ಗ್ರಾಮಗಳ ನೂರಾರು ರೈತರು ಕೃಷಿ ಕೂಲಿಕಾರರು ತಾಲೂಕು ಸಂಘಟನಾ ಸಮಿತಿ ಆಶ್ರಯದಲ್ಲಿ ತಾಲ್ಲೂಕು ಕಛೇರಿ ಎದುರು ಪ್ರದರ್ಶನ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ಅರ್ಪಿಸಿದರು.

ಸಭೆಯನ್ನುದ್ದೇಶಿಸಿ ಜಿಲ್ಲಾ ಅಧ್ಯಕ್ಷ ಕಾ॥ ಅಬ್ರಹಾಂ ಕರ್ಕಡ ತಾಲ್ಲೂಕು ಕಾರ್ಯದರ್ಶಿ ಕಾ॥ ಯು.ದಾಸ ಭಂಡಾರಿ, ಅಧ್ಯಕ್ಷ ಕಾ॥ ಶಿವರಾಮಶೆಟ್ಟಿ ಮುಂತಾದವರು ಮಾತನಾಡಿದರು.

ರಾಯಚೂರು ಜಿಲ್ಲೆಯಲ್ಲಿ ಎಸ್.ಎಫ್.ಐ. ಉಚಿತ ಬೋಧನಾ ಶಿಬಿರಗಳು

ರಾಯಚೂರು: ಸ್ಥಳೀಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಸುಮಾರು ಒಂದು ತಿಂಗಳು ಉಚಿತ ಬೋಧನೆ ಎಸ್.ಎಫ್.ಐ. ನಗರ ಸಮಿತಿಯಿಂದ ಏರ್ಪಡಿಸಲಾಗಿತ್ತು. ಗಣಿತ, ಇಂಗ್ಲೀಷ್, ವ್ಯಾಕರಣ, ವಿಜ್ಞಾನ ವಿಷಯಗಳಿಗೆ ಸುಮಾರು ಆರು ಜನ ಶಿಕ್ಷಕರು ಬೋಧನೆ ಮಾಡಿದರು. ಮುಕ್ತಾಯ ಸಮಾರಂಭ ಮಾರ್ಚ್ 17ರಂದು ನಡೆದು ಮುಖ್ಯ ಅತಿಥಿಗಳಾಗಿ ಪಿ. ಸುಧಾಕರ ಉಪನ್ಯಾಸಕರು. ಉಚಿತ ಬೋಧನ ತರಗತಿಗಳನ್ನು ಶ್ಲಾಘಿಸಿ ಮಾತನಾಡಿದರು. ನಗರ ಎಸ್.ಎಫ್.ಐ. ಅಧ್ಯಕ್ಷರಾದ ಕಾ॥ ಬಸವಂತರಾಯ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಪರಿಸ್ಥಿತಿ ಕುರಿತಂತೆ ಕಾ॥ ರಾಮನಗೌಡ ಜಿಲ್ಲಾ ಕಾರ್ಯದರ್ಶಿ ಮಾತನಾಡಿದರು. ಮಾರುತಿ ಸ್ವಾಗತಿಸಿ ಮಹದೇವಾ ವಂದನೆ ಸಲ್ಲಿಸಿದರು.

ದೇವದುರ್ಗ: ಸ್ಥಳೀಯ ನಗರ ಸಮಿತಿಯಿಂದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಒಂದುವರೆ ತಿಂಗಳು ಉಚಿತ ಬೋಧನೆ ಸೌಲಭ್ಯ ಒದಗಿಸಲಾಗಿತ್ತು. ಸುಮಾರು 60 ವಿದ್ಯಾರ್ಥಿಗಳು ಭಾಗವಹಿಸಿದ್ದು, ಮಾರ್ಚ್ 24ರಂದು 'ಮುಕ್ತಾಯ ಸಮಾರಂಭ' ಏರ್ಪಡಿಸಲಾಗಿತ್ತು. ಶ್ರೀ ಉತ್ತಪ್ಪ, ವೀರಣ್ಣ, ವಕೀಲರು ಹಾಗೂ ಮಹಿಳಾ ಕಾಲೇಜು ಪ್ರಾಚಾರ್ಯರು, ಉಚಿತ ಬೋಧನೆ ನೀಡಿದ ಶ್ರೀ ಗೋಂದಿಯವರು ಭಾಗವಹಿಸಿದ್ದರು. ಜಿಲ್ಲಾಕಾರ್ಯದರ್ಶಿ ಕಾ॥ ರಾಮನಗೌಡ ಮಾತನಾಡಿ, ಶಿಕ್ಷಣ ವ್ಯವಸ್ಥೆಯ ಲೋಪ ದೋಷಗಳು ಸುಧಾರಿಸದೇ ವಿದ್ಯಾರ್ಥಿಗಳನ್ನು ಕೊಲೆಯ ಅಪರಾಧಕ್ಕೆ ಸಮನಾಗಿಸುವ ಪರೀಕ್ಷಾ 'ಸುಗ್ರಿವಾಜ್ಞೆ' ಖಂಡಿಸಿ ಮಾತನಾಡಿದರು.

ಲಿಂಗಸುಗೂರು; ಲಿಂಗಸುಗೂರಿನ ಹಟ್ಟಿಯ ಸಂತ ಅನ್ನಮ್ಮ ಪ್ರೌಢ ಶಾಲೆಯಲ್ಲಿ ಮಕ್ಕಳಿಂದ ಸಾವಿರಾರು ರೂ. ಡೊನೇಷನ್ ಪಡೆಯುತ್ತಿದ್ದನ್ನು, ಎಸ್.ಎಫ್.ಐ., ಡಿ.ವೈ.ಎಫ್.ಐ. ಖಂಡಿಸಿ, 'ಅಡ್ಮಿಷನ್' ತಡೆಗಟ್ಟಲಾಗಿದೆ. ಶಿಕ್ಷಣಾಧಿಕಾರಿಗಳ ಅನುಮತಿ ಪಡೆಯದೇ ಎಡ್‌ಮಿಷನ್ ಪ್ರಾರಂಭಿಸಿದ್ದು ಕಾನೂನು ಬಾಹಿರವಾಗಿದೆ ಯೆಂದು, ಶಿಕ್ಷಣಾಧಿಕಾರಿಗಳು ಎಡ್‌ಮಿಷನ್ ರದ್ದುಪಡಿಸಿ ಡೊನೇಷನ್ ಇಲ್ಲದೇ ಮಕ್ಕಳಿಗೆ ಪ್ರವೇಶ ನೀಡಬೇಕೆಂದು ಸಲಹೆ ನೀಡಿದ್ದಾರೆ. ಪ್ರತಿವರ್ಷ ೫ ಲಕ್ಷ ರೂ. ಸಂಗ್ರಹವಾಗುತ್ತಿತ್ತು.

ಜಿಲ್ಲೆಯಲ್ಲಿ ಮೊದಲನೇ ಬಾರಿ ಈ ಹೋರಾಟ ಯಶಸ್ವಿಯಾಗಿದೆ. ಈ ಹಿಂದೆ 1978ರಲ್ಲಿ ಇಲ್ಲಿ ಇದೇ ಹೋರಾಟ ಮಾಡಿ ಯಶಸ್ವಿಯಾಗಲು ಅಲ್ಲಿ ಕಾರ್ಮಿಕರ ಬೆಂಬಲದ ಪ್ರತೀಕವಾಗಿದೆ.



ಮಾರ್ಚ್ 28 ನಿರುದ್ಯೋಗ ವಿರೋಧಿ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿರುವ SFIನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾ॥ ನಿಲೋತ್ಪಲ್ ಬಸು, ಕಾ॥ ಮೂರ್ತಿ, ನಾಗಮೋಹನ ದಾಸ್, ಶಿವರಾಂ ಮತ್ತು ಜಯಕುಮಾರ್.

ಕ್ರೀಡಾರಂಗ

ಕ್ರೀಡಾರಂಗದಲ್ಲಿ, ದ.ಆಫ್ರಿಕಾದ ಹಾಗೂ ಇಸ್ರೇಲ್‌ಗಳ ಬಹಿಷ್ಕಾರ, ಆ ದೇಶಗಳನ್ನೂ ಪ್ರವೇಶಿಸಿ ಕ್ರೀಡೆಯಲ್ಲಿಯೂ ಸಮಾನ ಹಕ್ಕು ದೊರೆಯದ್ದರ ವಿರುದ್ಧದ ಹೋರಾಟದ ಅವಶ್ಯಕವಾದ ಭಾಗ. ಈ ಹೋರಾಟದ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅನೇಕ ವಿಧವಾಗಿ ನಡೆದಿದೆ. ಒಲಿಂಪಿಕ್ಸ್‌ನಿಂದ ಹಿಡಿದು ಪ್ರತಿಯೊಂದು ಕ್ರೀಡೆಗಳ ಅಂತರ್ರಾಷ್ಟ್ರೀಯ ಫೆಡರೇಷನ್‌ಗಳಲ್ಲಿಯೂ ನಡೆದಿದೆ.

ಇತ್ತೀಚೆಗೆ ವಿಶ್ವ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಇಸ್ರೇಲ್ ಎದುರು ಆಡಬೇಕಾದ ಪಂದ್ಯಕ್ಕೆ ಭಾರತದ ಪುರುಷರ ಟಿ.ಟಿ. ತಂಡ ಹಾಕಿದ ಬಹಿಷ್ಕಾರ ಅದರ ಮುಂದುವರಿದ ಭಾಗ. ಈ ಬಹಿಷ್ಕಾರ ಅಂತರರಾಷ್ಟ್ರೀಯ ಟೇಬಲ್ ಟೆನ್ನಿಸ್ ಫೆಡರೇಷನ್‌ನ ಕೋಪಕ್ಕೆ ಗುರಿಯಾಗಿ ಈ ಫೆಡರೇಷನ್ ನಿಯಮಾವಳಿಯಂತೆ 'ಅನರ್ಹತೆ'ಗೆ ಗುರಿಯಾಗುತ್ತದೆಂದು ತಿಳಿದೂ ಅದಕ್ಕೆ ಬಹಿಷ್ಕಾರ ಹಾಕಿದ್ದು ಶ್ಲಾಘನೀಯ 'ಇಸ್ರೇಲ್‌ನ ವಿರುದ್ಧ ನಾವು ಆಡಲೇಬಾರದು' ಎಂಬುದು ನಮ್ಮಗಿರುವ ಖಡಾಖಂಡಿತ ಆದೇಶ ಎಂದು ಭಾರತ ಟೇಬಲ್ ಟೆನ್ನಿಸ್ ಫೆಡರೇಷನ್‌ನ ಕಾರ್ಯದರ್ಶಿ ಹೇಳಿದ್ದಾರೆ.

ಕಳೆದ ವರ್ಷ ಡೇವಿಸ್ ಕಪ್ ಟೆನಿಸ್ ಪಂದ್ಯಾವಳಿಯಲ್ಲಿ ಇಸ್ರೇಲ್‌ನೊಂದಿಗೆ ಭಾಗವಹಿಸುವುದರಲ್ಲಿ ಅತ್ತಿಂದಿತ್ತ ತೂಗುಯ್ಯಾಲೆಯಾಡಿದ ಸರ್ಕಾರ ಕೊನೆ ಗಳಿಗೆಯಲ್ಲಿ ಬಹಿಷ್ಕಾರ ಹಾಕಿತು. 1987ರಲ್ಲಿ ಭಾರತದಲ್ಲಿಯೇ ವಿಶ್ವಟೇಬಲ್ ಟೆನ್ನಿಸ್ ಪಂದ್ಯದಲ್ಲಿ ಆಡಲಾಗದಂತೆ ವಿಧಿಸಿತು.

ಕೆಲವೊಮ್ಮೆ ತೂಗುಯ್ಯಾಲೆ ನೀತಿಯನ್ನು ಅನುಸರಿಸುವ ಭಾರತ ಸರ್ಕಾರ ಇದೇ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂಬುದು ಪ್ರಜಾಸತ್ತಾತ್ಮಕ ಚಳುವಳಿಯ ಒತ್ತಾಯ.

ಭಗತ್‌ಸಿಂಗ್ ಸ್ಮಾರಕ ಗ್ರಂಥಾಲಯ ಉದ್ಘಾಟನೆ

ಬೆಳಗಾಂ ಜಿಲ್ಲೆಯ ಸೌದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುಜನ ಫೆಡರೇಷನ್ ಹಾಗೂ ಕರ್ನಾಟಕ ಬಂಜಾರ ಶಿಕ್ಷಣ ಸಂಸ್ಥೆ ಜಂಟಿ ಆಶ್ರಯದಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ ಅಂಗವಾಗಿ ಗ್ರಂಥಾಲಯವೊಂದನ್ನು ಉದ್ಘಾಟಿಸಲಾಯಿತು. ಶ್ರೀಮಾನ್ ಕೆ.ಎಸ್. ಗೋವಣ್ಣನವರ್ ಗ್ರಂಥಾಲಯವನ್ನು ಉದ್ಘಾಟಿಸಿದರು. ಎಂ.ಎಸ್. ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾ॥ ಎಲ್.ಎಸ್.ನಾಯಕರವರು ಮಾತನಾಡಿ ಭಗತ್‌ಸಿಂಗ್ ನಮ್ಮ ದೇಶದ ಭವಿಷ್ಯದ ಬಗ್ಗೆ ಕಂಡ ಕನಸು ಇಂದಿನ ಯುವ ಪೀಳಿಗೆ ನಿರ್ವಹಿಸಬೇಕಾಗಿರುವ ಜವಾಬ್ದಾರಿ ಕುರಿತು ಹೇಳಿದರು.

ಸಮಾರಂಭಕ್ಕೆ ಸ್ಫೂರ್ತಿದಾಯಕವಾಗಿ ಶ್ರೀಮಾನ್ ಎಸ್.ಆರ್.ರಾಯನಗೌಡ ಅವರು ಗ್ರಂಥಾಲಯಕ್ಕೆ 1,200 ಬೆಲೆ ಬಾಳುವ ಪುಸ್ತಕಗಳನ್ನು ಹಾಗೂ ಎಲ್. ಎಸ್.ನಾಯಕ್‌ರವರು 200 ರೂ. ದೇಣಿಗೆ ಹಾಗೂ 245 ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು. ಸಮಾರಂಭದಲ್ಲಿ 5 25 ರೂ. ದೇಣಿಗೆ ಸಂಗ್ರಹಿಸಲಾಯಿತು. ಎಂ.ಬಿ.ಕಂಬಳಿಯವರು ಮೊದಲಿಗೆ ಸ್ವಾಗತಿಸಿ ಎಲ್.ಬಿ.ಬೆಂಡಿಗೇರಿಯವರು ವಂದಿಸಿದರು.

ಬೀಡಿ ಕಾರ್ಮಿಕರ ಒತ್ತಾಯ

ಮಂಗಳೂರು ಬೀಡಿ ಕೆಲಸಗಾರರ ಸಂಘದ ನಿಯೋಗವೊಂದು ತೆರಳಿ ಸೌತ್ ಕೆನರಾ ಹೋಂ ಇಂಡಸ್ಟ್ರೀಸ್ ಮೇನೇಜರ್‌ರವರಿಗೆ ಮನವಿಯೊಂದನ್ನು ಅರ್ಪಿಸಿ ಬೀಡಿ ಕಾರ್ಮಿಕರಿಗೆ ಲೋಗ್ ಪುಸ್ತಕ, ನೀಡಬೇಕು, ಪ್ರಾವಿಡೆಂಟ್ ಫಂಡ್ ಫಾರ್ಮ್ ಹಾಗೂ ವೇಜ್‌ಸ್ಲಿಪ್ ಕೊಡಬೇಕು, ಎಲೆ ಎವರೇಜ್ ಕುರಿತು ಬೋರ್ಡುಗಳಲ್ಲಿ ಪ್ರಕಟಿಸಬೇಕು ಮುಂತಾದ ಬೇಡಿಕೆಗಳ ಕುರಿತು ಒತ್ತಾಯಿಸಲಾಯಿತು. ಲೋಗ್‌ಪುಸ್ತಕ, ಪ್ರಾವಿಡೆಂಟ್ ಫಾರ್ಮ್‌ಗಳನ್ನು ಕೆಲವೇ ದಿನಗಳಲ್ಲಿ ಒದಗಿಸುವುದಾಗಿ ಮೇನೇಜರ್ ಆಶ್ವಾಸನೆ ನೀಡಿದರು ಎಂದು ಕಾರ್ಯದರ್ಶಿ ಕಾ॥ ಜೆ.ವೀರಪ್ಪ ತಿಳಿಸಿದ್ದಾರೆ.

ಅಖಿಲ ಭಾರತ ಕಿಸಾನ್ ಸಭಾ

26ನೇ ಅಧಿವೇಶನ

ಏಪ್ರಿಲ್ 27 - 30

ಖಮ್ಮಂ, ಆಂಧ್ರ ಪ್ರದೇಶ



ಹತ್ತುಸಾವಿರ ನೇಕಾರರ ವಿಧಾನಸಭಾ ಚಲೋ

ಹೈದರಾಬಾದ್: ಮಾರ್ಚ್ ೯ರಂದು ಆಂಧ್ರಪ್ರದೇಶದ 13 ಜಿಲ್ಲೆಗಳಿಂದ ಬಂದ ಹತ್ತು ಸಾವಿರಕ್ಕೂ ಹೆಚ್ಚು ನೇಕಾರರು ರಾಜ್ಯ ಸಚಿವಾಲಯಕ್ಕೆ ಮೆರವಣಿಗೆ ಹೋಗಿ ಹಸಿದು ಕಂಗಾಲಾದ, ಆರ್ಥಿಕವಾಗಿ ಕುಸಿದಿರುವ ನೇಕಾರರ ದಾರುಣ ಸ್ಥಿತಿಯ ಬಗ್ಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಎಚ್ಚರಿಸಿದರು. ಮೆರವಣಿಗೆಕಾರರಲ್ಲಿ 15 00 ಮಹಿಳೆಯರೂ ಇದ್ದರು. ಆಂಧ್ರಪ್ರದೇಶ ಕೈಮಗ್ಗ ನೇಕಾರರ ಸಂಘದ ನೇತೃತ್ವದಲ್ಲಿ ಕಳೆದ ಜನವರಿ ತಿಂಗಳಿಂದ ನಡೆಯುತ್ತಿರುವ ಹೋರಾಟದ ಮೂರನೇ ಘಟ್ಟ ಇದಾಗಿತ್ತು. ಇದರೊಂದಿಗೆ ಈ ಕಾರ್ಯಕ್ರಮದ ಸದ್ಯದ ಹಂತ ಅಂತ್ಯಗೊಂಡಿದೆ.

ಕೈಮಗ್ಗ ಆಂಧ್ರಪ್ರದೇಶದ ಅತೀ ದೊಡ್ಡ ಒಂದು ಗುಡಿ ಕೈಗಾರಿಕೆ. 30 ಲಕ್ಷ ಮಂದಿಗೆ ಜೀವನೋಪಾಯ ಒದಗಿಸುವ ಉದ್ದಿಮೆ. ಈಗ ಸರ್ಕಾರದ ಹೊಸ ಜವಳಿ ನೀತಿಯ ಪರಿಣಾಮವಾಗಿ ಬಹಳ ಮಂದಿ ನೇಕಾರರು ಉದ್ಯೋಗ ಕಳಕೊಂಡಿದ್ದಾರೆ. ಜೀವನೋಪಾಯವಿಲ್ಲದೆ ಹಸಿದು ಕಂಗಾಲಾಗಿದ್ದಾರೆ. ಇದುವರೆಗೆ 42 ಆತ್ಮಹತ್ಯೆಗಳು ಇದರಿಂದಾಗಿ ನಡೆದಿವೆ. ಸಿ.ಪಿ.ಐ.(ಎಂ) ಈಗಾಗಲೇ ಗುಂಟೂರು ಮತ್ತು ಪ್ರಕಾಶಂ ಜಿಲ್ಲೆಗಳ ಇಂತಹ ಎಂಟು ಕುಟುಂಬಗಳಿಗೆ ತಲಾ 1000 ರೂ. ಪರಿಹಾರ ಸಂಗ್ರಹಿಸಿ ಕೊಟ್ಟಿದೆ.

ಕೇಂದ್ರ ಸರ್ಕಾರ ತನ್ನ ಹೊಸ ಜವಳಿ ನೀತಿಯೊಂದಿಗೆ ಮಿಲ್ ವಲಯಕ್ಕೆ ರಿಯಾಯ್ತಿ ನೀಡಿ "ಜನತಾ ಬಟ್ಟೆ ಯೋಜನೆ"ಯನ್ನು ಕೈಮಗ್ಗ ವಲಯಕ್ಕೆ ಹೇರಿತ್ತು ಇತ್ತ ರಾಜ್ಯ ಸರ್ಕಾರವೂ ನೇಕಾರರಿಗೆ ಕನಿಷ್ಠ ಪರಿಹಾರ ಕ್ರಮಗಳನ್ನು ಕೈಗೊಳ್ಳಲಿಲ್ಲ.

ನೇಕಾರರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎತ್ತಿಕೊಳ್ಳಲು ಕಳೆದ ಡಿಸೆಂಬರ್ 17ರಂದು ಕಾರ್ಯಕರ್ತರ ಸಭೆಯಲ್ಲಿ, ಸಮಸ್ಯೆಗಳನ್ನು ಗುರುತಿಸಿ, ಬೇಡಿಕೆಗಳನ್ನು ರೂಪಿಸಿ, ಮೂರು ಘಟ್ಟಗಳ ಹೋರಾಟ ಕಾರ್ಯಕ್ರಮ ಯೋಜಿಸಲಾಯಿತು. ಮೊದಲ ಘಟ್ಟದಲ್ಲಿ ಜನವರಿ 23ರಂದು ರಾಜ್ಯದ 11 ಜಿಲ್ಲಾ ಕಛೇರಿಗಳ ಎದುರು ಹತ್ತುಸಾವಿರ ನೇಕಾರರು ಧರಣಿ ನಡೆಸಿದರು. ಎರಡನೇ ಹಂತದಲ್ಲಿ ಫೆಬ್ರವರಿ ೨ರಂದು 12 ಜಿಲ್ಲೆಗಳ 70 ಕೇಂದ್ರಗಳು 'ರಾಸ್ತಾರೋಕೋ' ನಡೆಯಿತು. 20 ಸಾವಿರ ನೇಕಾರರು ಇದರಲ್ಲಿ ಭಾಗವಹಿಸಿದರು. ಹಲವೆಡೆ ಬಂಧಿತರಾದರು. ಮಾರ್ಚ್ ೯ರ ಮೆರವಣಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಪತ್ರದೊಂದಿಗೆ ಈ ಹಂತದ ಕಾರ್ಯಕ್ರಮ ಸದ್ಯ ಮುಗಿದಂತಾಗಿದೆ.

ಕೈಮಗ್ಗ ವಲಯದ ಬಿಕ್ಕಟ್ಟಿಗೆ ಕೇಂದ್ರದ ನೀತಿಗಳೇ ಮುಖ್ಯ ಹೊಣೆಯೆಂದು ಆಂಧ್ರಪ್ರದೇಶದ ರೈತ ಸಂಘಂನ ಕಾರ್ಯದರ್ಶಿ ಕೆ.ಸತ್ಯನಾರಾಯಣ ನೇಕಾರರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು.

'ವಿಧಾನಸಭಾ ಚಲೋ' ದಿನ ವಿಧಾನಸಭೆಯೊಳಗೆ ಸಿ.ಪಿ.ಐ.(ಎಂ) ಎಂ.ಎಲ್.ಎ.ಗಳು ಸದನ ನೇಕಾರರ ಸಮಸ್ಯೆಗಳನ್ನು ಗಮನಿಸುವಂತೆ ಮಾಡಿದರು.

ಗಣಮುಕ್ತಿ ಪರಿಷದ್‌ನ ಯಶಸ್ವಿ ಸಮ್ಮೇಳನ

ಅಗರ್ತಲಾ: ತ್ರಿಪುರಾ ಉಪಜಾತಿ ಗಣಮುಕ್ತಿ ಪರಿಷತ್ತಿನ 13ನೇ ರಾಜ್ಯ ಸಮ್ಮೇಳನ ಫೆಬ್ರವರಿ 26ರಿಂದ 28ರವರೆಗೆ ನಡೆಯಿತು. ಕಳೆದ ಸಮ್ಮೇಳನದ ನಂತರ, ವಿಶೇಷವಾಗಿ ಕಳೆದ ಒಂದು ವರ್ಷದಲ್ಲಿ ಬುಡಕಟ್ಟು ಜನರು ತಾವು ದೀರ್ಘ ಹೋರಾಟಗಳಿಂದ ಪಡೆದ ಸವಲತ್ತುಗಳನ್ನು ಉಳಿಸಿಕೊಳ್ಳಲು ಕಾಂಗ್ರೆಸ್(ಐ) ಯುಜೆ.ಎಸ್. ಕೂಟದ ದಬ್ಬಾಳಿಕೆಯ ವಿರುದ್ಧ ಹೋರಾಟ ನಡೆಸುತ್ತಾ ಬಂದ ಹಿನ್ನೆಲೆಯಲ್ಲಿ ಈ ಸಮ್ಮೇಳನ ನಡೆಯಿತು.

ಗಣಮುಕ್ತಿ ಪರಿಷತ್‌ನ ಅಧ್ಯಕ್ಷ ಕಾ॥ ದಶರಥ್ ದೇಬ್ ಕಿಂಬಾವೃಟ ಹಾರಿಸಿ ಸಮ್ಮೇಳನವನ್ನು ಆರಂಭಿಸಿದರು. ಕಾಂಗ್ರೆಸ್ ಸರ್ಕಾರದ ಪ್ರಕಾರ ಬುಡಕಟ್ಟು ಜನರ ಸಮಸ್ಯೆ ಕೇವಲ ಆರ್ಥಿಕ ಸ್ವರೂಪದ್ದು. ಆದ್ದರಿಂದ ಅವರ ರಾಜಕೀಯ ಆಕಾಂಕ್ಷೆಗಳನ್ನು ಅದು ಹತ್ತಿಕ್ಕುತ್ತಿದೆ. ಹೆಚ್ಚಿನ ವಿರೋಧ ಪಕ್ಷಗಳು ಕೂಡಾ ಅವರ ಸಮಸ್ಯೆಗಳನ್ನು ಕೃಷಿ ಸಂಬಂಧೀ ಪ್ರಶ್ನೆಗಳೆಂದಷ್ಟೇ ಪರಿಗಣಿಸುತ್ತವೆ. ಸಿ.ಪಿ.ಐ.(ಎಂ) ಮಾತ್ರವೇ ಸಮಸ್ಯೆಗಳ ದೇಶೀ ಪ್ರಶ್ನೆಯ ನಿಜವಾದ ಮೂಲಭೂತ ಅಂಶವನ್ನು ಅರಿತುಕೊಂಡಿದೆ. ದೇಶದ ಎಲ್ಲೆಡೆಗಳಲ್ಲೂ ಬುಡಕಟ್ಟು ಜನಾಂಗಗಳು ಒಂದೇ ಕಡೆ ವಾಸಿಸುವ ಪ್ರದೇಶಗಳಲ್ಲಿ ಸ್ವಾಯತ್ತ ಪ್ರದೇಶಗಳನ್ನೂ ರಚಿಸಬೇಕೆಂದು ಒತ್ತಾಯಿಸುತ್ತದೆ ಎಂದು ಕಾ॥ ದೇಬ್ ತಮ್ಮ ಆರಂಭ ಭಾಷಣದಲ್ಲಿ ತಿಳಿಸಿದರು.

ರಾಜ್ಯಾದ್ಯಂತ 261 ಪ್ರತಿನಿಧಿಗಳು, ಸಿ.ಐ.ಟಿ.ಯು. ಮುಂತಾದ ಸಂಘಟನೆಗಳಿಂದ 18ಸೌಹಾರ್ದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ನಡೆದ ಚರ್ಚೆಗಳಲ್ಲಿ ರಾಜ್ಯದಲ್ಲಿನ ಈಗಿನ ಭಯಾನಕ ಸ್ಥಿತಿಯನ್ನು ಪ್ರತಿನಿಧಿಗಳು ವಿವರಿಸಿದರು. ಸಮ್ಮೇಳನ 14 ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿತು. 30 ಅಂಶಗಳ ಒಂದು ಬೇಡಿಕೆ ಪಟ್ಟಿಯನ್ನು ರೂಪಿಸಿತು. 81 ಸದಸ್ಯರುಳ್ಳ ಹೊಸ ಕೇಂದ್ರ ಸಮಿತಿಯನ್ನು ಹಾಗೂ 25 ಸದಸ್ಯರುಗಳ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಕಾ॥ ದಶರಥ್ ದೇಬ್ ಅಧ್ಯಕ್ಷರಾಗಿ, ನಾರಾಯಣ ರೂಪಿನಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ರಚನಾತ್ಮಕ ವಿರೋಧ ಪಕ್ಷವಾಗಿ ಸಿ.ಪಿ.ಐ.(ಎಂ)

ಮದ್ರಾಸ್: ತಮಿಳುನಾಡಿನ 9ನೇ ವಿಧಾನಸಭೆಯ ಮೊದಲ ಅಧಿವೇಶನ ಫೆಬ್ರವರಿ 6ರಂದು ಆರಂಭಗೊಂಡಿತು. ಹೊಸ ಸದಸ್ಯರ ಪ್ರತಿಜ್ಞಾ ಸ್ವೀಕಾರ ನಡೆಯುವಾಗ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾ॥ ಕೆ.ರಮಣಿ ತಾತ್ಕಾಲಿಕ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಿದ ಸಿ.ಪಿ.ಐ.(ಎಂ) ಎಂ.ಎಲ್.ಎ.ಗಳು ಭಾಷಣದ ಸಕಾರಾತ್ಮಕ ಅಂಶಗಳನ್ನು ಸ್ವಾಗತಿಸಿದರು. ಅದೇ ವೇಳೆಗೆ ಅದರ ನಕಾರಾತ್ಮಕ ಅಂಶಗಳತ್ತ ಸರ್ಕಾರದ ಗಮನ ಸೆಳೆದರು.

ಪೋಷಕಾಂಶ ಊಟ ಯೋಜನೆಯ ನೌಕರರ ಖಾಯಗೊಳಿಸುವಿಕೆ, ಎ.ಐ.ಎ.ಡಿ.ಎಂ.ಕೆ. ಕಿತ್ತುಕೊಂಡಿದ್ದ ಸ್ಥಳೀಯ ಸಂಸ್ಥೆಗಳ ಅಧಿಕಾರಗಳ ಮರುಸ್ಥಾಪನೆ, ಎಂ.ಜಿ.ಆರ್. ಆಳ್ವಿಕೆಯಲ್ಲಿ ರದ್ದುಪಡಿಸಿದ ವಿಧಾನಪರಿಷತ್ತನ್ನು ಮತ್ತೆ ಸ್ಥಾಪಿಸುವ ನಿರ್ಣಯವನ್ನು ಪಕ್ಷ ವಿರೋಧಿಸಿತು. ಆದರೆ ಇತ್ತೀಚೆಗಷ್ಟೆ ಜನತೆಯ ಅಗಾಧ ಆಕಾಂಕ್ಷೆಗಳೊಂದಿಗೆ ಆಯ್ಕೆಯಾದ ಸರ್ಕಾರವನ್ನು ಸೋಲಿಸಬಾರದೆಂದು ಮತದಾನ ನಡೆಯುವಾಗ ಸಿ.ಪಿ.ಐ.(ಎಂ) ಎಂ.ಎಲ್.ಎ.ಗಳು ಸದನದಿಂದ ಹೊರ ನಡೆದರು.

ಕಾರ್ಪೊರೇಷನ್‌ಗಳು ಮತ್ತು ಸಹಕಾರ ಸಂಘಗಳಿಗೆ ಚುನಾವಣೆ, ಕೇಂದ್ರ-ರಾಜ್ಯ ಸಂಬಂಧಗಳ ಪ್ರಜಾಸತ್ತಾತ್ಮಕ ಪುನರ್ರಚನೆಗೆ ಬೆಂಬಲ, ಎ.ಐ.ಎ.ಡಿ.ಎಂ.ಕೆ. ಸರ್ಕಾರ ಸಾರಾಯಿ ಸಾಹುಕಾರರಿಗೆ ನೀಡಿದ ರಿಯಾಯ್ತಿಗಳ ರದ್ಧತಿ, ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ನಮೂದಿಸಿದ ಎಲ್ಲಾ ಭಾಷೆಗಳಿಗೆ ಸಮಾನ ಸ್ಥಾನಮಾನ- ಈ ಅಂಶಗಳನ್ನು ಸಿ.ಪಿ.ಐ.(ಎಂ) ಸ್ವಾಗತಿಸಿತು. ಆದರೆ ಕಾರ್ಮಿಕ ವರ್ಗದ ಸಮಸ್ಯೆಗಳು, ದುರ್ಬಲ ವಿಭಾಗಗಳ ಮೇಲೆ ಹಲ್ಲೆಗಳು, ರೈತರ ಸಾಲ ಮತ್ತಿತರ ಸಮಸ್ಯೆಗಳು, ಭೂಸುಧಾರಣೆ, ಶಿಕ್ಷಣ ಸಂಸ್ಥೆಗಳಲ್ಲಿ ಅಕ್ರಮ ಈ ಬಗ್ಗೆ ರಾಜ್ಯಪಾಲರ ಭಾಷಣ ಮೌನವಾಗಿರುವ ಬಗ್ಗೆ ಸಿ.ಪಿ.ಐ.(ಎಂ) ವಿಧಾನಸಭಾ ಗುಂಪಿನ ಮುಖಂಡ ಕಾ॥ ರಮಣಿ ಮಾತನಾಡಿದರು.

ಕಾರ್ಪೊರೇಷನ್ ಚುನಾವಣೆಗಳಿಗೆ ಮತದಾನ ವಯಸ್ಸು 21 ವರ್ಷ ಎಂಬ ಅಂಶವನ್ನು ಕೂಡಾ ಸಿ.ಪಿ.ಐ.(ಎಂ) ಎಂ.ಎಲ್.ಎ.ಗಳು ವಿರೋಧಿಸಿದರು. 18ರಿಂದ 21 ವರ್ಷದವರೆಗಿನ ಮತದಾರರಿಗೆ ಅವಕಾಶ ತಪ್ಪಿಸಬಾರದೆಂದರು. ನಂತರ ಮುಖ್ಯಮಂತ್ರಿಗಳು ಮೇ ತಿಂಗಳೊಳಗೆ ಹೊಸ ಮತದಾರರ ಪಟ್ಟಿ ತಯಾರಾಗಿದ್ದರೆ ಅದರ ಮೇಲೇನೇ ಕಾರ್ಪೊರೇಷನ್ ಚುನಾವಣೆ ನಡೆಸುವುದಾಗಿ ಒಪ್ಪಿಕೊಂಡರು.

ನಮೀಬಿಯಾ ಸ್ವಾತಂತ್ರ್ಯ-ವರ್ಣದ್ವೇಷಿಗಳ ಅಪ್ರಾಮಾಣಿಕತೆ

ಕಳೀ ವರ್ಷ ಒಂಭತ್ತು ಸುತ್ತಿನ ನಾಲ್ಕು ಪಕ್ಷೀಯ ಮಾತುಕತೆಗಳ ನಂತರ ದಕ್ಷಿಣಆಫ್ರಿಕಾ ಸರ್ಕಾರ ಹತ್ತು ವರ್ಷಗಳ ಹಿಂದೆ ಸೆಪ್ಟೆಂಬರ್ 29, 1978ರಂದು ವಿಶ್ವಸಂಸ್ಥೆಯ ಭದ್ರತಾ ಸಮಿತಿ ನಮೀಬಿಯಾ ಅಂಗೀಕರಿಸಿದ್ದ ನಿರ್ಣಯ ಸಂಖ್ಯೆ 435 ನ್ನು ಪಾಲಿಸಲು ಒಪ್ಪಿಕೊಂಡಿತ್ತು. ದಕ್ಷಿಣಆಫ್ರಿಕಾ ನಮೀಬಿಯಾವನ್ನು ಕಾನೂನು ಬಾಹಿರವಾಗಿ ಹಿಡಿದಿಟ್ಟುಕೊಂಡಿದ್ದು ಅದನ್ನು ನಮೀಬಿಯಾದ ಜನತೆಗೆ ಹಿಂದಿರುಗಿಸಬೇಕೆಂದೂ, "ವಿಶ್ವಸಂಸ್ಥೆ ಸಂಕ್ರಮಣ ನೆರವು ಗುಂಪಿ"ನ (ಅಂಡಾಗ್) ಉಸ್ತುವಾರಿಯಲ್ಲಿ ಮುಕ್ತ ಚುನಾವಣೆ ನಡೆಯುವಂತಾಗಬೇಕೆಂದು ಆ ನಿರ್ಣಯ ಕರೆ ನೀಡಿತ್ತು.

ಕಳೆದ ಡಿಸೆಂಬರ್‌ನಲ್ಲಿ ಅಂಗೋಲಾ, ಕ್ಯೂಬಾ, ದಕ್ಷಿಣ ಆಫ್ರಿಕಾ ಮತ್ತು ಅಮೆರಿಕಾದ ಪ್ರತಿನಿಧಿಗಳು ಬ್ರಾಝವಿಲೆ ನಗರದಲ್ಲಿ ಸಹಿ ಹಾಕಿದ ಒಪ್ಪಂದದ ಪ್ರಕಾರ ಏಪ್ರಿಲ್ 1ರಂದು ನಮೀಬಿಯಾದ ರಾಜಧಾನಿ ವಿಂಡ್‌ಹೋಕ್‌ನಲ್ಲಿ ಅಂಟಾಗ್‌ನ ಮುಖ್ಯಸ್ಥ ಮಾರ್ಟಿ ಅಹ್ತಿಸಾರಿ ಹಾಗೂ ಅಂಟಾಗ್ ಸೇನಾಪಡೆಗಳ ಕಮಾಂಡರ್ ಜನರಲ್ ಪ್ರೇಂಚಂದ್ ವಿಶ್ವಸಂಸ್ಥೆಯ ಬಾವುಟ ಏರಿಸಿ ನಮೀಬಿಯಾ ಸ್ವಾತಂತ್ರ್ಯದ ಪ್ರಕ್ರಿಯೆ ಆರಂಭಿಸಿದರು. ಆದರೆ ಕೆಲವೇ ಗಂಟೆಗಳೊಳಗೆ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ವಿಶ್ವಸಂಸ್ಥೆಯ ಉಸ್ತುವಾರಿ ಪಡೆಯನ್ನು ವಾಪಾಸು ಕಳಿಸುವ ಬೆದರಿಕೆ ಹಾಕಿದರು. ಇದಕ್ಕೆ ಅವರು ನೀಡಿದ ನೆರವೆಂದರೆ 25 ಸ್ವಾಪೋ ಹೋರಾಟಗಾರರು ಅಂಗೋಲಾದಿಂದ ನಮೀಬಿಯಾಕ್ಕೆ ಪ್ರವೇಶಿಸಿದರು ಎಂಬುದು. ಆದರೆ ವಾಸ್ತವವಾಗಿ ಸ್ವಾತಂತ್ರ್ಯದ ಪ್ರಕ್ರಿಯೆ ಆರಂಭ ಹರ್ಷದಿಂದ ಆಚರಿಸುತ್ತಿದ್ದ ನಮೀಬಿಯಾ ಜನತೆಯ ಮೇಲೆ ದಕ್ಷಿಣ ಆಫ್ರಿಕಾದ ಪೊಲೀಸರು ಹೆಲಿಕಾಪ್ಟರುಗಳಿಂದ ಗುಂಡಿನ ಸುರಿಮಳೆಗರೆದು ಕದನವಿರಾಮವನ್ನು ಮುರಿದರು ಎಂದು ವರದಿಯಾಗಿದೆ. ಇದರಿಂದ ಈಗ ಮತ್ತೆ ಸ್ವಾಪೋ ವಿಮೋಚನಾ ಹೋರಾಟ ಗಾರರು ಮತ್ತು ದಕ್ಷಿಣ ಆಫ್ರಿಕಾದ ವರ್ಣದ್ವೇಷೀ ಸೈನಿಕರ ನಡುವೆ ತೀವ್ರ ಕದನ ಆರಂಭವಾಗಿ ಈಗಾಗಲೇ 15 0ಮಂದಿ ಬ್ರಾಝವಿಲೆ ಒಪ್ಪಂದಕ್ಕೆ ದೊಡ್ಡ ಕುತ್ತುಬಂದಿದೆ.

ತಾವು ಕದನವಿರಾಮಕ್ಕೆ ಬದ್ಧವಾಗಿರದಿರಲು ಯಾವ ಕಾರಣವೂ ಇಲ್ಲ ಎಂದು ಸ್ವಾಪೋ ವಕ್ತಾರರು ವಿವರಿಸಿದ್ದಾರೆ. ಯಾಕೆಂದರೆ ಮುಕ್ತ ಚುನಾವಣೆ ನಡೆದರೆ ಅವರೇ ಗೆಲ್ಲುವುದೆಂದು ಅವರ ಶತ್ರುಗಳೂ ಒಪ್ಪುವ ಸಂಗತಿ. ವಿಶ್ವ ಸಮುದಾಯದ ತಾವು ಒತ್ತಡಕ್ಕೆ ಮಣಿದ ಮತ್ತು ಮಿಲಿಟರಿ ಪರಿಹಾರ ಅಸಾಧ್ಯ ಎಂದು ಮನಗಂಡ ವರ್ಣದ್ವೇಷಿಗಳು ಈ ಒಪ್ಪಂದಕ್ಕೆ ಸಹಿ ಹಾಕಿದ್ದರೂ ಹೆಜ್ಜೆ-ಹೆಜ್ಜೆಗೂ ಅವರ ಅಪ್ರಾಮಾಣಿಕತೆ ಹೊರ ಹೊಮ್ಮುತ್ತಿದ್ದು ಏಪ್ರಿಲ್ 1ರಂದು ಇದು ಬಟ್ಟ ಬಯಲಾಗಿದೆ.

ಇದು ಬೂರ್ಜ್ವಾ ಪ್ರಜಾಪ್ರಭುತ್ವ

ಬಂಡವಾಳಶಾಹೀ ಜಗತ್ತು ಮತ್ತು ಮುಕ್ತ ಜಗತ್ತು ಇವೆರಡನ್ನೂ ಸಮಾನಾರ್ಥಕ ಪದಗಳಾಗಿ ನಮ್ಮ ಬೂರ್ಜ್ವಾ ಪತ್ರಿಕೆಗಳು ಬಳಸುತ್ತವೆ. ಇದು ಆಳುವವರ ಸಂಕುಚಿತ ದೃಷ್ಟಿಯ ಮೇಲೆ ಬೆಳಕು ಚೆಲ್ಲುತ್ತದಷ್ಟೆ ಎಂಬ ಕಾರ್ಮಿಕ ಅನುಭವದಿಂದ ತಿಳಿದ ಸತ್ಯ. ಆದರೆ ಇದನ್ನು ಇನ್ನೂ ಒಪ್ಪದವರಿಗೆ ಆಸ್ಟ್ರೇಲಿಯಾ ಮತ್ತೊಂದು ಉದಾಹರಣೆ ನೀಡಿದೆ.

ಆಸ್ಟ್ರೇಲಿಯಾದಲ್ಲಿ ಅಮೆರಿಕನ್ ಸೇನಾ ನೆಲೆಗಳ ವಿರುದ್ಧ ಸಾರ್ವಜನಿಕಾಭಿಪ್ರಾಯ ಬಲಗೊಳ್ಳುವುದನ್ನು ಕಂಡ ಲೇಬರ್ ಪಕ್ಷದ ಸರ್ಕಾರ ಇದಕ್ಕೆ ಅನುಮತಿಯನ್ನು ನವೀಕರಿಸುವ ಮೊದಲು ಸಾರ್ವಜನಿಕ ಚರ್ಚೆಗೆ ಅವಕಾಶ ಕೊಡುವುದಾಗಿ ಭರವಸೆ ನೀಡಿತ್ತು. ಆದರೆ ಈಗಾಗಲೇ ಅಮೆರಿಕನ್ ನೆಲೆಗಳಿಗೆ ಪರವಾನಿಗೆಯನ್ನು ಗುಪ್ತವಾಗಿ ವಿಸ್ತರಿಸಲಾಗಿದೆ ಎಂದು ಇತ್ತೀಚೆಗೆ ಅಲ್ಲಿನ ಪ್ರಧಾನಮಂತ್ರಿ ಹಾಕ್ ಈಗ ಘೋಷಿಸಿದ್ದಾರೆ. ಆಸ್ಟ್ರೇಲಿಯಾದ ಪ್ರಜಾಪ್ರಭುತ್ವವಾದಿಗಳನ್ನು ತಲ್ಲಣಗೊಳಿಸಿದ ಇನ್ನೊಂದು ಸಂಗತಿಯೆಂದರೆ ಈ ಒಪ್ಪಂದ ಅಂತ್ಯಗೊಳಿಸಲು ಕೊಡಬೇಕಾದ ನೋಟೀಸಿನ ಅವಧಿಯನ್ನು ಒಂದು ವರ್ಷದಿಂದ ಮೂರು ವರ್ಷಕ್ಕೇರಿಸಲು ಈ ಗುಪ್ತ ವ್ಯವಹಾರದಲ್ಲಿ ಒಪ್ಪಲಾಗಿದೆ. ಆಸ್ಟ್ರೇಲಿಯಾ ಸಂಸತ್ತಿನಲ್ಲಿ ಕೂಡಾ ಈ ಯಾವುದರ ಬಗ್ಗೆಯೂ ಪ್ರಸ್ತಾಪವೇ ನಡೆದಿಲ್ಲ.

ಕೋಟಿಕೋಟಿ ಡಾಲರು ಧ್ವಂಸ-ಸಾವಿರಾರು ಸಾವು

8 ವರ್ಷಗಳಲ್ಲಿ ಆರ್ಥಿಕ ವ್ಯವಸ್ಥೆಯ ಮೇಲೆ 17.25 [illegible] ಕೋಟಿ ಡಾಲರುಗಳ ನಷ್ಟ ಹೇರಿಕೆ. 5 7 ಸಾವಿರ ಜನಗಳ ಸಾವು. ತೀವ್ರಗಾಯ. ತೀವ್ರ ಊನ. ಇದು ಹನ್ನೆರಡು ಮೋಣಾಲೂರಲು [illegible] ಪುಟ್ಟ ನಿಕರಾಗುವಾದ ಮೇಲೆ ಜಗತ್ತಿನ ಪ್ರಜಾಪ್ರಭುತ್ವದ ಗುತ್ತೇದಾರಿಕೆ ತನ್ನ ತಲೆಯ ಮೇಲೆ ತಾನೇ ಹೊರಿಸಿಕೊಂಡು ಥಳಿಥಳಿ ಗುಡುಗುತ್ತಿದ್ದ ರೇಗನ್ ಆಡಳಿತ ನಡೆಸಿದ ಎಂಟು ವರ್ಷಗಳ ಆಕ್ರಮಣದ ಪರಿಣಾಮ. ಇಷ್ಟೇ ಅಲ್ಲ. ಇದರ ಜೊತೆಗೆ 1985 ರಿಂದ ಹೇರಿದ ವ್ಯಾಪಾರದ ಮೇಲಿನ ನಿರ್ಬಂಧ. ಬಹುಪಕ್ಷೀಯ ಆಧಾರದ ಮೇಲೆ ಸಾಲ ನೀಡುವ ಅಂತರ್ರಾಷ್ಟ್ರೀಯ ಸಂಸ್ಥೆಗಳ ಮೇಲೂ ನಿಕರಾಗುವಕ್ಕೆ ಸಾಲ ನೀಡಲು ನಿರ್ಬಂಧ. ಇವೆಲ್ಲಕ್ಕೂ ಮುಕುಟವಿಟ್ಟಂತೆ ಕೃಷಿ ಅಭಿವೃದ್ಧಿಗೆ 18 ಕೋಟಿ ಡಾಲರುಗಳ ನೆರವಿನ ವಿರುದ್ಧ ವಿಟೋ ಅಧಿಕಾರ ಚಲಾಯಿಸಿದರು ಮಾಜಿ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಶುಲ್ಜ್. ವಾಸ್ತವವಾಗಿ ಈ ಸಾಲ ಅವರು ಸದಾ [illegible] ನಿಕರಾಗುವಾದ [illegible] ವಲಯಕ್ಕೇ ಹೋಗುವಂತಹದಿತ್ತು!

[illegible] ನಿಕರಾಗುವಾ ಬಹಳ ಬೆಲೆ ತೆರಬೇಕಾಯಿತು. ಆದರೆ ರೇಗನ್ ಧೋರಣೆಗಳೆಲ್ಲಾ ವಿಫಲಗೊಂಡವು. ಕ್ರಾಂತಿಯನ್ನು [illegible] ನಿಕರಾಗುವಾದ ಯೋಜನಾ ಮತ್ತು ಬಜೆಟ್ [illegible] ಮುಖ್ಯಸ್ಥ [illegible]

'ಪ್ರುಟ್ಟ್‌ಸಪುಲಿ'ಯ ಜಾದೂವಿನ ಹಿಂದೆ....

[illegible]

ಬ್ರಿಟನ್ನಿಗೆ ಈ ಅಧಿಕಾರ ನೀಡಿದವರ್ಯಾರು?

ಇತ್ತೀಚೆಗೆ ಭಾರತ ಮತ್ತು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದ ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಜಿಯೋಫ್ರೆ ಹೋವ್ [illegible] ಸರ್ಕಾರ [illegible] ಅಫ್‌ಘಾನಿಸ್ತಾನದಲ್ಲಿ, ವಿಶಾಲ ಆಧಾರದ ಸರ್ಕಾರ ಸ್ಥಾಪಿಸುವಂತಾಗಬೇಕೆಂದು ಅಭಿಪ್ರಾಯಪಟ್ಟು ತನ್ನ ಈ ಪ್ರಸ್ತಾಪಕ್ಕೆ ವಿಶ್ವ ಸಮುದಾಯದ ಬೆಂಬಲ ಇದೆ ಎಂದು ಹೇಳಿಕೊಂಡಿದ್ದರು.

ಅವರ ಈ ಹೇಳಿಕೆ ಅಫ್‌ಘಾನಿಸ್ತಾನದ [illegible]

ಗಳನ್ನು ಎಂದೂ ಪರಿಹರಿಸಲಾರವು ಎಂದಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯ ದೇಶವಾದ ಬ್ರಿಟನ್ ಈ ಸಮಸ್ಯೆಯ ಬಗ್ಗೆ ಇನ್ನೂ ಜವಾಬ್ದಾರಿಯುತ, ವಾಸ್ತವ ದೃಷ್ಟಿಯ ನಿಲುವು ತಳೆಯುವುದು ಅಗತ್ಯ ಎಂದಿದ್ದಾರೆ.

ಹೋವ್‌ರವರ ಹೇಳಿಕೆಗಳು ಅಫ್‌ಘಾನ್ ಸಮಸ್ಯೆಯ ಶಾಂತಿಯುತ ಪರಿಹಾರಕ್ಕೆ ಅಡ್ಡಿಯಾಗುತ್ತವೆ ಎಂದಿರುವ ಅಫ್‌ಘಾನಿಸ್ತಾನ ವಕ್ತಾರರು ಬಂಡುಕೋರರಿಗೆ ಇನ್ನಷ್ಟು ನೆರವು ನೀಡುವ ಅವರ ಘೋಷಣೆ, ವಹೀದ್ ಸರ್ಕಾರದ ಪತನಕ್ಕೆ ಅವರ ಕರೆ "ಅಫ್‌ಘಾನಿಸ್ತಾನದಲ್ಲಿ ಮತ್ತೊಂದು ಕಾಬೂಲಿನಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸುವ ಬ್ರಿಟನ್ ಸರ್ಕಾರದ ಇನ್ನೊಂದು ಮಸಲತ್ತು" ಎಂದಿದ್ದಾರೆ.

ಈ ಶತಮಾನದ ಆದಿಯಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಅಫ್‌ಘಾನಿಸ್ತಾನವನ್ನು ಆಕ್ರಮಿಸಿ ಶಾಹ ಸೂಜಾನನ್ನು ತಮ್ಮ ಕೈಗೊಂಬೆ ಏಜೆಂಟನಾಗಿ ನೇಮಿಸಿದರು. ಆದರೆ ಜನತೆ ಬಂಡಾಯ ಎದ್ದು ಅವರನ್ನು ಉರುಳಿಸಿದರು. ಜೊತೆಗೆ ಬ್ರಿಟಿಶ್ ಆಕ್ರಮಣಕಾರೀ ಸೈನಿಕರನ್ನು ನಿರ್ನಾಮ ಮಾಡಿಬಿಟ್ಟರು. ಬ್ರಿಟನ್ ಇನ್ನೂ ತನ್ನ ಸಾಮ್ರಾಜ್ಯಶಾಹೀ ವೈಭವ ಮರೆತಂತಿಲ್ಲ.

ಅತ್ತ ಜಲಾಲಾಬಾದನ್ನು ವಶಪಡಿಸಿಕೊಳ್ಳಲು 14ಸಾವಿರ ಬಂಡುಕೋರರು, ಪಾಕಿಸ್ತಾನೀ ಪಡೆಗಳು ಹಾಗೂ ಪಾಕಿಸ್ತಾನೀ ಮಿಲಿಟರಿ ಸಲಹೆಗಾರರು ಪ್ರತಿದಿನ ಸಾವಿರಗಟ್ಟಲೆ ರಾಕೆಟ್‌ಗಳನ್ನು ಸುರಿದು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾಗಿವೆಯಷ್ಟೇ ಅಲ್ಲ, ಅವರು ಆಕ್ರಮಿಸಿ ಕೊಂಡಿದ್ದ ಕೆಲವು ಪ್ರದೇಶಗಳಿಂದ ಹಿಂದೆ ತಳ್ಳಲ್ಪಟ್ಟಿರುವ [illegible] ಅಫ್‌ಘಾನ್ ಪಡೆಗಳು ಯಶಸ್ವಿಯಾಗಿವೆ.

KRNW/BGS-312 MAG(2) PRB DECR 319-78/79

ಮುಚ್ಚಿರುವ ಕಾರ್ಖಾನೆ ತೆರೆಯಲು ಒತ್ತಾಯಿಸಿ ರಾಜ್ಯಾದ್ಯಂತ ಪ್ರದರ್ಶನ

ಕರ್ನಾಟಕ ರಾಜ್ಯದಲ್ಲಿ ಅಕ್ರಮವಾಗಿ ಮುಚ್ಚಿರುವ ಕಾರ್ಖಾನೆಗಳನ್ನು ಕೂಡಲೇ ತೆರೆಯಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲು ಒತ್ತಾಯಿಸಿ ರಾಜ್ಯದಾದ್ಯಂತ ಪ್ರತಿಭಟನಾ ಪ್ರದರ್ಶನ, ಧರಣಿ, ಮೆರವಣಿಗೆ ನಡೆಸಲು ಸಿ.ಐ.ಟಿ.ಯು. ರಾಜ್ಯ ಸಮಿತಿ ನೀಡಿದ ಕರೆಯಂತೆ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆಸಿರುವ ವರದಿಗಳು ಬಂದಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಹರಿಹರ

5 ದಿನಗಳು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿ ಮಾರ್ಚ್ 31ರಂದು ಸಿ.ಐ.ಟಿ.ಯು. ನೇತೃತ್ವದ ಎಲ್ಲಾ ಸಂಘಗಳ ನೂರಾರು ಕಾರ್ಮಿಕರು ರಸ್ತೆ ತಡೆ ಚಳುವಳಿ ನಡೆಸಿದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಕಾರ್ಮಿಕ ಧುರೀಣ ಕಾ॥ ನಿತ್ಯಾನಂದ ಸ್ವಾಮಿ, ಆರ್.ಬಿ.ಅಂಗಡಿ, ಡಿ.ಜಿ.ಜೋಷಿ, ನಾರಾಯಣಸಾ, ಆರ್. ಹನುಮಂತಪ್ಪ, ಎಂ.ಎಸ್.ಆನಂದರಾವ್, ಧ್ರುವಕುಮಾರ್ ಇನಾಂದರ್ ಮತ್ತು ಅಮಿನಾಬಿ ಮಾತನಾಡಿ ಫೆಬ್ರವರಿ 21ರ ರಾಜ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಅನುಸರಿಸಿ ಮುಚ್ಚಿರುವ ಕಾರ್ಖಾನೆ ತೆರೆಯಲು ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿಯವರನ್ನು ಒತ್ತಾಯಿಸಿತು.

ರಾಣೆಬೆನ್ನೂರು

ಬಸ್ ನಿಲ್ದಾಣದ ಬಳಿ ರಸ್ತಾ ರೋಖೋ ಮಾಡಿದ 155 ಜನ ನೇಕಾರರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದರು. ಮಹಿಳೆಯರು, ಬೀಡಿ ಕಾರ್ಮಿಕ ಮಹಿಳೆಯರು ಬಂಧಿತರಲ್ಲಿ ಸೇರಿದ್ದಾರೆ. ನಿತ್ಯಾನಂದಸ್ವಾಮಿ, ಕ್ಯಾದಗಿ, ಬಸವರಾಜು ಅತಡಕರ, ಮುಂತಾದವರು ಸಭೆಯಲ್ಲಿ ಮಾತನಾಡಿ ನೇಕಾರರಿಗೆ ನೂಲು ಪೂರೈಕೆ, ಶೇ 30% ಕೂಲಿ ಹೆಚ್ಚಳ, ತುಂಗಭದ್ರಾ ನೂಲಿನ ಗಿರಣಿ ಕೂಡಲೇ ಕೆಲಸ ಆರಂಭಿಸ ಬೇಕೆಂದು ಒತ್ತಾಯಿಸಿದರು.

ಚಿಕ್ಕಮಗಳೂರು

ತೋಟ ಕಾರ್ಮಿಕ ಸಂಘದ ಸದಸ್ಯರು ಚಿಕ್ಕಮಗಳೂರಿನಲ್ಲಿ ಮಾರ್ಚ್ 29ರಂದು ಧರಣಿ ಸತ್ಯಾಗ್ರಹ ನಡೆಸಿ ಮನವಿ ಅರ್ಪಿಸಲಾಯಿತು ಎಂದು ಸಂಘದ ಕಾರ್ಯದರ್ಶಿ ಕಾ॥ ಎ.ಕೆ.ವಿಶ್ವನಾಥ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತೆರಿ ಲೋಕದ ಹೊಸ ಬಾಗಿಲ


ತೆಗೆದುಕೊ ಹಲಗೆ ಬಳುಪ
ಬಾಬಿಚ್ಚು ಪುಸ್ತಕದ ಹಾಳೆ
ಓದು ಬರಿಯುತ್ತ
ಲೋಕದ ಹೊಸ ಬಾಗಿಲ ತೆರೆ

ಎಲ್ಲ ನಿನ್ನೆಗಳು ಜೀತಕ್ಕೆ ಮೈತೇದು
ಜೀವ ಮುರುಟದ್ದು ಸಾಕು
ಬರೆಯುತ್ತ ಕಲಿಯುವ
ವ್ಯಥೆ ಕಳೆವ ನಾಳೆಗಳ ತೆರೆಯುವ

ಭರವಸೆಯ ನೆರಳಲ್ಲಿ ಮನ ತೆರೆದು
ಭ್ರಮೆ ಕಿತ್ತು ಬದುಕುವ

ಕಲಿತು ಕಲಿಸಿ ಪಾಪ ಕಳಂಕವ
ತೊಳೆದು
ತಲೆ ಎತ್ತಿ ಜಗದ ಜೊತೆಗೆ ಸಾಗುವ

-ಕೆ.ನ.ಶಿವತೀರ್ಥನ್
'ಗೆರೆಗಳು' ಸಂಕಲನದಿಂದ



"ಡೆಕ್ಕನ್ ಹೆರಾಲ್ಡ್" ಪತ್ರಿಕೆಯಲ್ಲಿ ಠಕ್ಕರ್ ವರದಿ ಚರ್ಚೆ ಕುರಿತು ಪೊನ್ನಪ್ಪರವರ ವ್ಯಂಗ್ಯಚಿತ್ರ

ಯಶಸ್ವಿ ಆಟೋ ಮುಷ್ಕರ

ಪುಟ 1ರಿಂದ

ಮೊದಲನೆಯ ಹಂತದಲ್ಲಿ ಜಂಟಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಆಟೋ ಡ್ರೈವರ್ಸ್ ವೆಲ್‌ಫೇರ್ ಅಸೋಸಿಯೇಷನ್ ನಂತರ ಹಿಂತೆಗೆದಿದೆ. ಇತರೆ ಒಂದೆರಡು ಸಂಘಗಳು ಸಹ ಮುಷ್ಕರದಲ್ಲಿ ಪಾಲ್ಗೊಳ್ಳದಿದ್ದರೂ ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ಸಂಚಾರ ಸಂಪೂರ್ಣವಾಗಿ ಸ್ತಬ್ಧಗೊಂಡಿತ್ತು. ಏಪ್ರಿಲ್ 4ರಂದು ನಗರದ ವಿವಿಧ ಪ್ರದೇಶಗಳಿಂದ ವಿಧಾನಸೌಧಕ್ಕೆ ಮೆರವಣಿಗೆಗಳನ್ನು ಕೊಂಡೊಯ್ಯಲು ಹಾಗೂ ಸಭೆಗಳನ್ನು ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಪೊಲೀಸರು ಶಾಂತಿಯುತ ಪ್ರತಿಭಟನೆಗೂ ಅವಕಾಶ ನೀಡದೆ ನೂರಾರು ಚಾಲಕರನ್ನು ಬಂಧಿಸಿ ಮರುದಿನ ನ್ಯಾಯಾಲಯಕ್ಕೆ ಹಾಜರುಪಡಿಸಿ ಮೊಕದ್ದಮೆಗಳನ್ನು ಹೂಡಿರುತ್ತಾರೆ.

ಸರ್ಕಾರದ ವಿಳಂಬ ನೀತಿಯಿಂದಾಗಿ ಚಾಲಕ ಹಾಗೂ ನಾಗರೀಕ ಬಹಳ ತೊಂದರೆಗೀಡಾಗುತ್ತಾರೆ. ಸಚಿವರು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಕೂಡಲೇ ಮಾತುಕತೆ ನಡೆಸಿ ಇತ್ಯರ್ಥಗೊಳಿಸುವ ಬದಲು ತಮ್ಮ ಪ್ರವಾಸದ ಗುಂಗಿನಲ್ಲೇ ಇದ್ದುದು ವಿಪರ್ಯಾಸವಾಗಿದೆ. ಚಾಲಕರ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸುವ ಬದಲು ಹೋರಾಟವನ್ನು ಹತ್ತಿಕ್ಕಲು ಪೊಲೀಸ್ ಬಲ ಪ್ರಯೋಗದ ಮೂಲಕ ಪ್ರಯತ್ನಿಸಲಾಗಿದೆ. ಇನ್ನೊಂದೆಡೆ ಸಿ.ಐ.ಟಿ.ಯು. ಕಾರ್ಯಕರ್ತರು ಬಂಧನದಲ್ಲಿರುವಾಗ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ। ಜೀವರಾಜಆಳ್ವ ಪೊಳ್ಳು ಆಶ್ವಾಸನೆ ನೀಡಿ ರಿಕ್ಷಾಗಳನ್ನು ಓಡಿಸುವಂತೆ ಚಾಲಕರಿಗೆ ಮನವಿ ಮಾಡಿದರು. ಕೆಲವು ಪೋಟಿ ಸಂಘಗಳಿಂದ ಮುಷ್ಕರ ನಿಲ್ಲಿಸಿರುವುದಾಗಿ ಪತ್ರಿಕಾ ಹೇಳಿಕೆಗಳೂ ಸಹ ಬಂದವು. ಆದರೆ ಮುಷ್ಕರವನ್ನು ವಿಫಲಗೊಳಿಸುವ ಯಾವುದೇ ಕುತಂತ್ರಗಳು ಫಲಿಸಲಿಲ್ಲವೆಂಬುದು ಗಮನಾರ್ಹವಾಗಿದೆ. ಜನತೆಯ ಸಮಸ್ಯೆಗಳನ್ನು ಬಗೆಹರಿಸುವ ಬದಲು ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಲು ಯತ್ನಿಸುತ್ತಿರುವ ಜನತಾದಳ ಸರ್ಕಾರದ ಜನವಿರೋಧಿ ನೀತಿಗೆ ಇದು ಮತ್ತೊಂದು ಸಾಕ್ಷಿಯಾಗಿದೆ.

ವಿಧಾನಸೌಧ ಚಲೋ

ಪುಟ 1ರಿಂದ

ಹಿಪ್ಪರಗಿಯ ಕೊಂಡಿಬಾ ಶಿವರಾಂ ಗಾಯಕವಾಡ ಎಂಬ ನೌಕರ 15 ರೂ. ನಿಂದ ದುಡಿಯಲು ಪ್ರಾರಂಭಿಸಿದವ 27 ವರ್ಷಗಳ ಸೇವಾವಧಿಯಲ್ಲಿ ತನ್ನ 75 ನೇ ವರ್ಷದಲ್ಲಿ ಆತ ಪಡೆಯುವ ವೇತನ 240 ರೂ.ಗಳು. ಆಳಂದ ತಾಲೂಕಿನ ಚಂದವ್ವನ ವೇತನ 10ರೂ.ನಿಂದ ಪ್ರಾರಂಭವಾಗಿದೆ. ಅಬ್ದುಲ್ ಕರೀಂಸಾಬ್ 15 ವರ್ಷಗಳ ನಂತರ ಈ ವೇತನ ಪಡೆಯುತ್ತಿದ್ದಾನೆ. ಈಗ ಇಡೀ ನೌಕರರ ನೋವು ಸಂಕಟ ಒಂದೇ. ತಮ್ಮೊಂದಿಗೆ ದುಡಿಯುವ ಸರ್ಕಾರದಿಂದ ನೇಮಿಸಿದ ಒಬ್ಬ ಗುಮಾಸ್ತ 2,000 ರೂ. ವೇತನ ಪಡೆದರೆ ಸಂಪನ್ಮೂಲ ಕ್ರೋಢೀಕರಿಸುವ ನೌಕರನಿಗೆ ಮಾತ್ರ ಅರೆ ಹೊಟ್ಟೆ.

ರಾಜ್ಯಾದ್ಯಂತ ದುಡಿಯುತ್ತಿರುವ 18 ಸಾವಿರಕ್ಕೂ ಹೆಚ್ಚು ನೌಕರರ ಜೀವನ ಇಂದು ಅಂಧಕಾರದಲ್ಲಿ ಮುಳುಗಿದೆ.

ಬೇಡಿಕೆಗಳು; ಸೇವಾ ನಿಯಮಾವಳಿ ರಚಿಸಿ ನೌಕರಿ ಭದ್ರತೆ ಒದಗಿಸಿ ಎಲ್ಲಾ ನೌಕರರನ್ನು ಖಾಯಂಗೊಳಿಸಬೇಕು.

- ವೇತನ ನಿಗದಿಗೊಳಿಸಿ ಸರ್ಕಾರಿ ನೌಕರರಿಗೆ ಸಿಗುವ ರಜೆ, ವೇತನ ಸೇವಾ ಸೌಲಭ್ಯ ಒದಗಿಸಬೇಕು.
- ಸೇವಾ ಹಿರಿತನ ಆಧಾರದಲ್ಲಿ ಬಡ್ತಿ ನೀಡಬೇಕು.
- ಸೇವೆಯಿಂದ ತೆಗೆದ ಎಲ್ಲಾ ನೌಕರರನ್ನು ಮುಂದುವರೆಸಬೇಕು ಮುಂತಾದ ಬೇಡಿಕೆಗಳ ಮನವಿಪತ್ರವನ್ನು ಸಚಿವರಾದ ಶ್ರೀಮಾನ್ ಎಂ.ಪಿ.ಪ್ರಕಾಶ್‌ರವರಿಗೆ ಅರ್ಪಿಸಲಾಯಿತು. ನೌಕರ ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸುವುದಾಗಿ ಸಚಿವರು ಆಶ್ವಾಸನೆ ನೀಡಿದ್ದರು. ರ್‍ಯಾಲಿಯ ನೇತೃತ್ವವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥ ಎನ್.ಕೆ.ಉಪಾಧ್ಯಾಯ ಅಧ್ಯಕ್ಷ ಹಾಗೂ ಜಿಲ್ಲಾಪರಿಷತ್ ಸದಸ್ಯ ಕಾ॥ ಮಾರುತಿ ಮಾನ್ಪಡೆ, ಡಿ.ಎಂ.ಕಲಾಸಿ, ಮಲ್ಲಪ್ಪ ಉಪಾರ್‌ರವರು ವಹಿಸಿದ್ದರು.

ಈ ವಾರ......

ಆಟೋದಲ್ಲಿ ಪ್ರಯಾಣಿಸುವ ಮೂವರು ಪ್ರಯಾಣಿಕರಿಗೆ ಹಿಂದೆ ಇದ್ದ ನಿಯಮವನ್ನು ರದ್ದುಪಡಿಸುವುದಕ್ಕೆ ಸರ್ಕಾರ ಯಾವ ಕಾರಣವನ್ನೂ ನೀಡಿಲ್ಲ. ಆಟೋ ಚಾಲಕರು ಹಾಗೂ ಸಾರ್ವಜನಿಕರ ಮನವಿ ಮೇರೆಗೆ ಸರ್ಕಾರ ದೇಶದ ಎಲ್ಲ ಕಡೆ ಇರುವಂತೆ ಮೂವರ ಪ್ರಯಾಣಕ್ಕೆ ಅವಕಾಶ ಕೊಟ್ಟು ಅಧಿಕ ದರ ನಿಗದಿ ಮಾಡಿತ್ತು.

ಆಗ ಅದು ಸಾಧುವಾದ ನಿರ್ಣಯವೆಂದು ಸರ್ಕಾರಕ್ಕೆ ಅನಿಸಿದ್ದರೆ ಈಗ್ಯಾಕೆ ಸಾಧುವಲ್ಲ? ಎನ್ನುವುದನ್ನೂ ಸರ್ಕಾರ ತಿಳಿಸಬೇಕಲ್ಲ, ತಿಳಿಸಿಲ್ಲ. ಅದೇ ಈಗಿನ ಮುಷ್ಕರಕ್ಕೆ ದಾರಿ ಮಾಡಿಕೊಟ್ಟಿದೆ. ಆಟೋದಲ್ಲಿ ಒಬ್ಬರೇ ಪ್ರಯಾಣ ಮಾಡಿದರೂ ಒಂದೇ ದರ. ಇಬ್ಬರು ಮಾಡಿದರೂ ಒಂದೇ ದರ ಮೂವರಿಗೂ ಒಂದೇ ದರ ಎಂದರೆ ಹೇಗೆ?

ಈ ಮೂಲಭೂತ ಪ್ರಶ್ನೆಗಳನ್ನು ಸರ್ಕಾರ ಪರಿಶೀಲಿಸಿ ಸೂಕ್ತ ರೀತಿಯಲ್ಲಿ ದರವನ್ನು ನಿಗದಿ ಮಾಡಿದ್ದರೆ ತಕರಾರಿಗೆ ಅವಕಾಶವಿರುತ್ತಿರಲಿಲ್ಲ. ಆದರೆ ಸರ್ಕಾರ ಆ ಪ್ರಯತ್ನಕ್ಕೆ ಕೈ ಹಾಕದೆ ಎಲ್ಲ ಸಮಸ್ಯೆಗಳಿಗೂ ಹುಡುಕುವಂತೆ 'ಅಡ್‌ಹಾಕ್' ಪರಿಹಾರವನ್ನು ಹುಡುಕಿರುವುದೇ ಈಗಿನ ಗೊಂದಲಕ್ಕೆ ಕಾರಣ.

'-ಕನ್ನಡ ಪ್ರಭ'

1982ರಲ್ಲಿ 5 ,427 ಅತ್ಯಾಚಾರಗಳು ನಡೆದಿವೆ. ಈ ಪೈಕಿ 16ಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರವೇ ಹೆಚ್ಚು. ಈ ಸಂಖ್ಯೆ 1984ರಲ್ಲಿ 6,203ಕ್ಕೇರಿತು. 1986ರಲ್ಲಿ 7,322ಕ್ಕೆ ಜಿಗಿಯಿತು.

-ಸಂಯುಕ್ತ ಕರ್ನಾಟಕ

ಪ್ರಾಥಮಿಕ ಶಾಲಾ ಶಿಕ್ಷಣ ಬೇಸ್‌ಮೆಂಟ್ ಇಲ್ಲದ ಗಂಗಾರಾಂ ಕಟ್ಟಡದ ತರಹ. ಗ್ರೀನ್‌ಬೆಲ್ಟ್ (ಹಸಿರು ಪಟ್ಟಿ) ಆಕಾರ ಅಮೀಬಾದ ಹಾಗೆ ಬದಲಾಗುತ್ತಿರುತ್ತದೆ.

ಸದನದಲ್ಲಿ ಕೇಳಿಸಿದ್ದು

ಪುಸ್ತಕಗಳ ನಿಷೇಧ ಮತ್ತು ಸುಡುವುದು ಅತ್ಯಂತ ಖಂಡನೀಯ ವಿಷಯಗಳು.

ಖುಷ್ವಂತ್‌ಸಿಂಗ್

ನಿಗೂಢದಲ್ಲಿ ನಿಗೂಢವಾದದ್ದೆಂದರೆ ಧಾವನ್ ವಿರುದ್ಧ ಸಾಕ್ಷ್ಯಗಳನ್ನು ಕಲೆ ಹಾಕಲು ಠಕ್ಕರ್ ಅವರಿಗೆ ಸಹಾಯ ಮಾಡಿದ ತನಿಖಾ ಅಧಿಕಾರಿಗಳ ತಂಡಕ್ಕೇ ಮತ್ತೊಮ್ಮೆ ತನಿಖೆ ನಡೆಸುವ ಹೊಣೆಗಾರಿಕೆ ವಹಿಸಿಕೊಟ್ಟು ಠಕ್ಕರ್ ರೂಪಿಸಿದ ಚೌಕಟ್ಟು ನಾಶಪಡಿಸುವಂತೆ ಮಾಡಲಾಯಿತು.

ಇಂಡಿಯನ್ ಎಕ್ಸ್‌ಪ್ರೆಸ್

ನಮೀಬಿಯಾ ಕಪ್ಪು ಬಣ್ಣದ ಜನರ ಸ್ವಾತಂತ್ರ್ಯಾಕಾಂಕ್ಷೆಯ ಸತ್ವಪರೀಕ್ಷೆಯ ಕಣ. ವಿಶ್ವಸಂಸ್ಥೆಯ ನಿರ್ಣಯದಂತೆ ಆದೇಶ ಸ್ವತಂತ್ರಗೊಂಡರೆ ದಕ್ಷಿಣ ಆಫ್ರಿಕಾದ ವಿಮೋಚನೆಯೂ ದೂರ ಉಳಿಯುವುದಿಲ್ಲ. ವರ್ಣದ್ವೇಷಕ್ಕೆ ಜಗತ್ತಿನಲ್ಲಿ ಎಡೆ ಇರುವುದಿಲ್ಲ. ಈ ಹೊಸ ಪರ್ವದ ಪ್ರಾರಂಭಕ್ಕಾಗಿ ನಮೀಬಿಯಾ ಘರ್ಷಣೆಯಿಂದ ಮುಕ್ತಗೊಳ್ಳಬೇಕು ಸ್ವತಂತ್ರ ಸ್ಥಾನಮಾನ ಸ್ಥಿರಗೊಳಿಸಿಕೊಳ್ಳಬೇಕು.

-'ಕನ್ನಡ ಪ್ರಭ' ಸಂಪಾದಕೀಯ

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO Managing managerial Office: C/O Kriya Prakashana, Shobha Lodge Complex, 5th Main Road, Gandhinagar, Bangalore-560009.